# 3

# ಸಮಾಜದರ್ಶನ

ಘಟಕ 3 : ಸಮಾಜದರ್ಶನ

ಸಮಯ : 28 ಗಂಟೆಗಳು

**ಕಲಿಕಾ ಸಾಮಗ್ರಿಗಳು:**

- ಪಠ್ಯ ಪುಸ್ತಕ
- ಅಡಕ ಮುದ್ರಿಕೆ (ಡಿ.ವಿ.ಡಿ)
- ಆಯಾ ಪ್ರದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳು ಹಾಗೂ ಪೂರಕ ಗ್ರಂಥಗಳು

**ಮೌಲ್ಯಗಳು ಹಾಗೂ ಮನೋಭಾವ:**

- ಸಮಾಜದಲ್ಲಿ ಬೇರೂರಿರುವ ನಂಬಿಕೆಗಳ ಒಳಿತು ಕೆಡುಕುಗಳ ಕುರಿತಾದ ಜಿಜ್ಞಾಸೆಯ ಮನೋಭಾವ.
- ಸದಾಚಾರಗಳನ್ನು ರೂಢಿಸಿಕೊಳ್ಳುವ ಮನೋಭಾವ.
- ಪ್ರಜಾಪ್ರಭುತ್ವದ ಮೌಲ್ಯಗಳನ್ನು ರೂಢಿಸಿಕೊಳ್ಳುವ ಮನೋಭಾವ.
- ಸಮಾಜದ ಒಳಿತಿಗೆ ಧಕ್ಕೆಯನ್ನುಂಟುಮಾಡುವ ವಿಚಾರಗಳ ವಿರುದ್ಧವಾಗಿ ಪ್ರತಿಕ್ರಿಯಿಸುವ ಮನೋಭಾವ
- ಸಮಾಜ ವಿಮರ್ಶೆಯ ಕೃತಿಗಳನ್ನು ಓದುವ ಮನೋಭಾವ.

**ಮುನ್ನುಡಿ**

ಸಾಹಿತ್ಯವನ್ನು ಸಮಾಜದ ಪ್ರತಿಬಿಂಬವೆಂದೂ ಗತಿಬಿಂಬವೆಂದೂ ವಿಮರ್ಶಕರು ವ್ಯಾಖ್ಯಾನಿಸಿದ್ದಾರೆ. ಸಮಾಜದಲ್ಲಿ ನಡೆಯುವ ಆಗುಹೋಗುಗಳಿಗೆ ಕನ್ನಡಿ ಹಿಡಿಯುವ ಕೆಲಸವನ್ನು ಸಾಹಿತ್ಯವು ಮಾಡುತ್ತದೆ. ಆ ದೃಷ್ಟಿಯಲ್ಲಿ ಸಾಹಿತ್ಯವು ಸಮಾಜದ ಪ್ರತಿಬಿಂಬ. ಅಂತೆಯೇ ಸಮಾಜದಲ್ಲಿ ಆಗಬೇಕಾದ ಹಾಗೂ ಆಗುತ್ತಿರುವ ಬದಲಾವಣೆಗಳನ್ನು ಸಾಹಿತ್ಯವು ಸೆರೆಹಿಡಿಯುತ್ತದೆ ಎಂಬರ್ಥದಲ್ಲಿ ಅದು ಸಮಾಜದ ಗತಿಬಿಂಬವೂ ಹೌದು. 'ಸಮಾಜದರ್ಶನ' ವೆಂಬ ಪ್ರಸ್ತುತ ಘಟಕದಲ್ಲಿ ಮೂರು ಪಾಠಗಳಿವೆ. ಸಮಾಜದಲ್ಲಿ ಮೂಢನಂಬಿಕೆಗಳು ಹಾಸುಹೊಕ್ಕಾಗಿವೆ. ಅವುಗಳ ಕುರಿತು ಒಂದು ವಿನೋದದ ನೋಟವನ್ನು ಬೀರುವ ನಗೆಲೇಖನ ಮೂಢನಂಬಿಕೆಗಳ ಬೀಡಿನಲ್ಲಿ ಎಂಬ ಪಾಠದಲ್ಲಿದೆ. ಲೇಖಕಿ ಭುವನೇಶ್ವರಿ ಹೆಗಡೆಯವರು ಮೂಢನಂಬಿಕೆಯ ವಿವಿಧ ಪ್ರಸಂಗಗಳನ್ನು ಹಾಸ್ಯಮಯವಾಗಿ ನಿರೂಪಿಸುವುದರ ಮೂಲಕ ಸಮಾಜದರ್ಶನವನ್ನು ಮಾಡಿಸುತ್ತಾರೆ.

ಲೋಕಾನುಭವದ ಅಮೃತವನ್ನೇ ತಮ್ಮ ಕಗ್ಗದ ಮೂಲಕ ಉಣ್ಣಿಸಿದ ಡಿ.ವಿ.ಜಿ. ಯವರು ಸಮಾಜಜೀವನಕ್ಕೆ ಮಾರ್ಗದರ್ಶಕವಾದ ಸೂತ್ರಗಳನ್ನು ನೀಡಿದ್ದಾರೆ. ಪಠ್ಯಭಾಗದಲ್ಲಿರುವ ಕಗ್ಗದ ಪದ್ಯಗಳು ಸೃಷ್ಟಿಯ ವಿಸ್ಮಯವನ್ನು, ಒಳಿತು ಕೆಡುಕುಗಳು ಸರಿತಪ್ಪುಗಳು ಹೀಗೆ ಭಿನ್ನರುಚಿಗಳಿಂದ ಕೂಡಿದ ಬದುಕಿನ ಸತ್ಯವನ್ನು, ಹಳತು ಹೊಸತುಗಳ ಸಮನ್ವಯದಿಂದ ಸುಂದರವಾಗುವ ಬಾಳಿನ ಗುಟ್ಟನ್ನು ಮಾರ್ಮಿಕವಾಗಿ ಸಾರುತ್ತವೆ. ಸಮಾಜವು ಒಳಿತಿನ ಕಡೆಗೆ ಸಾಗಬೇಕೆಂಬ ಡಿ.ವಿ.ಜಿ. ಯವರ ಕಳಕಳಿ ಇಲ್ಲಿ ಗಮನಾರ್ಹ.

ಎಂ.ಎಸ್.ಕೆ. ಪ್ರಭು ಅವರು ಆಧುನಿಕ ನಾಟಕಕಾರರಲ್ಲಿ ಹೆಸರು ಪಡೆದವರು. ಅವರು ರಚಿಸಿದ 'ಬಕ' ನಾಟಕದ ವಸ್ತು ಪುರಾಣಕಾಲದ್ದಾದರೂ ಅದು ಸಾರುವ ಸಂದೇಶವು ಆಧುನಿಕ ಸಮಾಜಕ್ಕೂ ಅನ್ವಯಿಸುತ್ತದೆ. ಬಕಾಸುರನ ಉಪಟಳ ಒಂದು ವಿಧವಾದರೆ ಅದನ್ನು ನೆಪಮಾಡಿಕೊಂಡು ಜನತೆಯನ್ನು ಶೋಷಿಸುವ ಶ್ರೀಮಂತ ವ್ಯಾಪಾರಿಗಳ, ಅಧಿಕಾರಿಗಳ ದುಷ್ಟತನ ಇನ್ನೊಂದು. ಬಕಾಸುರನನ್ನು ಕೊಂದ ಭೀಮ ಜನರಿಗೆ ಒಮ್ಮೆ ಬಿಡುಗಡೆಯ ಸಂತೋಷವನ್ನು ತಂದರೂ ಮತ್ತೆ ಹೊಸ ಬಕಾಸುರರು ಹುಟ್ಟಿಕೊಳ್ಳುತ್ತಾರೆ. ಜನರ ಅಸಹಾಯಕತೆಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಸಮಾಜದ ಈ ವಾಸ್ತವದ ದರ್ಶನವನ್ನು ಈ ನಾಟಕವು ಮಾಡುತ್ತದೆ.

# UNIT FRAME

ಘಟಕದ ಹೆಸರು : ಸಮಾಜ ದರ್ಶನ

ಸಮಯ : 40 ಪಿರೇಡುಗಳು

ಕಲಿಕಾ ಸಾಧನೆಗಳು :

- ವರ್ತಮಾನ ಕಾಲದ ಸ್ಥಿತಿಗತಿಗಳನ್ನು ಸಮಕಾಲೀನ ಸಾಹಿತ್ಯಪ್ರಕಾರಗಳಿಂದ ಓದಿ ತಿಳಿದುಕೊಂಡು ಅವುಗಳನ್ನು ಪ್ರತಿಬಿಂಬಿಸುವ ಲೇಖನವನ್ನು ತಯಾರಿಸುವುದು.
- ಹೊಸಗನ್ನಡ ನವೋದಯ, ನವ್ಯ, ನವ್ಯೋತ್ತರ ಕಾಲಘಟ್ಟಗಳ ಸಾಹಿತ್ಯ ರಚನೆಗಳನ್ನು ಓದಿ ವಿಶ್ಲೇಷಿಸಿ ಆಶಯ ಮತ್ತು ಸ್ವಾರಸ್ಯವನ್ನು ಲಿಖಿತರೂಪದಲ್ಲಿ ಮಂಡಿಸುವುದು.
- ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮ, ಅಂತರ್‌ಜಾಲ ಮೊದಲಾದವುಗಳ ಭಾಷೆ, ಶೈಲಿ ಇತ್ಯಾದಿಗಳನ್ನು ಕರಗತ ಮಾಡಿಕೊಂಡು ಭಾಷಾ ನೈಪುಣ್ಯಗಳನ್ನು ಬೆಳೆಸಿಕೊಳ್ಳುವುದು.
- ಸಾಹಿತ್ಯ ಕೃತಿಗಳನ್ನು ಓದಿ ಅಲ್ಲಿ ಅಡಕವಾಗಿರುವ ಜೀವನ ಮೌಲ್ಯ, ಸಾಮಾಜಿಕ ನೀತಿ, ವಿಡಂಬನೆ ಮೊದಲಾದವುಗಳನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು.
- ಕನ್ನಡ ಭಾಷಾ ಪ್ರಭೇದಗಳನ್ನು ತಿಳಿದುಕೊಂಡು ಅವುಗಳ ವಿಶೇಷತೆಗಳನ್ನು ಕುರಿತು ಲಿಖಿತರೂಪದಲ್ಲಿ ಮಂಡಿಸುವುದು.
- ಪದನಿಷ್ಪತ್ತಿ, ಅರ್ಥ ವಿವರಣೆ, ಕ್ರಿಯಾಧಾತು, ನಾಮವಿಶೇಷಣ ಮೊದಲಾದ ವ್ಯಾಕರಣ ವಿಶೇಷತೆಗಳನ್ನು ತಿಳಿದುಕೊಂಡು ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುವುದು.

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ಹರಟೆ, ನಗೆಬರಹ, ಲಲಿತ ಪ್ರಬಂಧಗಳಲ್ಲಿ ಸಮಾಜದ ಕುಂದು ಕೊರತೆಗಳ ನವಿರಾದ ವಿಡಂಬನೆಯಿದೆ. | ಹರಟೆ, ನಗೆಬರಹ, ಲಲಿತ ಪ್ರಬಂಧ ಇವುಗಳ ಕುರಿತು ಈ ಹಿಂದಿನ ತರಗತಿಗಳಲ್ಲಿ ಕಲಿತಿರಬಹುದು. ಅವುಗಳನ್ನು ನೆನಪಿಸಿ ಈ ಪ್ರಕಾರಗಳ ಸ್ವರೂಪದ ಬಗ್ಗೆ ಹೇಳುವುದು.<br><br>ನಗೆಬರಹ ಮತ್ತು ವೈಚಾರಿಕ ಲೇಖನಗಳ ನಡುವಿನ ವ್ಯತ್ಯಾಸವನ್ನು ತಿಳಿಯಪಡಿಸುವುದು. ಟಿಪ್ಪಣಿ ಬರೆಯುವುದು.<br><br>ಲಲಿತ ಪ್ರಬಂಧಗಳ ವ್ಯಾಪ್ತಿಗೆ ಸೇರುವ ಹರಟೆ, ನಗೆಬರಹ ಇವುಗಳ ಕುರಿತಾದ ಸ್ಪಷ್ಟ ಚಿತ್ರವನ್ನು ನೀಡುವುದು. ವಿದ್ಯಾರ್ಥಿಗಳು ಅಲ್ಲಿನ ವಿಶೇಷತೆಗಳನ್ನು ದಾಖಲಿಸುವುದು, ಲಲಿತರೂಪದಲ್ಲಿ ಮಂಡಿಸುವುದು. | • ಸಾಮ್ಯ ವ್ಯತ್ಯಾಸವನ್ನು ಗುರುತಿಸಿ ಕೊಂಡು ಟಿಪ್ಪಣಿ ತಯಾರಿಸುತ್ತಾರೆ. |
| ಸಮಾಜದಲ್ಲಿ ಬೇರೂರಿರುವ ನಂಬಿಕೆಗಳೆಲ್ಲವೂ ಮೂಢ ನಂಬಿಕೆಗಳಲ್ಲ. ಕೆಲವು ನಂಬಿಕೆಗಳ ಹಿಂದೆ ವೈಜ್ಞಾನಿಕ ಸತ್ಯವೂ ಇದೆ.<br><br>ಜನಪದ ಜೀವನದಲ್ಲಿ ಹಾಸು ಹೊಕ್ಕಾಗಿರುವ ಈ ನಂಬಿಕೆಗಳು ಮೂಲದಲ್ಲಿ ಬರಿಯ ನಂಬಿಕೆಗಳಾಗಿರದೆ ಬದುಕನ್ನು ಅರಳಿಸುವ ಶಕ್ತಿಗಳಾಗಿದ್ದವು | ಸಮಾಜದಲ್ಲಿ ಬೇರೂರಿರುವ ನಂಬಿಕೆಗಳನ್ನು ಪಟ್ಟಿ ಮಾಡಲು ಸೂಚಿಸುವುದು. ಅವುಗಳ ವಿಶ್ಲೇಷಣೆ ತರಗತಿಯಲ್ಲಿ ಮಂಡಿಸುವುದು.<br><br>ನಂಬಿಕೆಗಳು ಬೆಳೆದು ಬಂದ ಬಗೆಯನ್ನು ವಿವೇಚಿಸುವುದು. ಅವುಗಳ ಹಿಂದಿರುವ ವೈಜ್ಞಾನಿಕ ಸತ್ಯಗಳನ್ನು ಚರ್ಚೆ, ವಿಚಾರ ಸಂಕಿರಣಗಳ ಮೂಲಕ ಕಂಡುಕೊಳ್ಳುವುದು. | • ಸಮಾಜದಲ್ಲಿ ಬೇರೂರಿರುವ ನಂಬಿಕೆಗಳ ಪಟ್ಟಿ ತಯಾರಿಸಿ, ವಿಶ್ಲೇಷಿಸಿ ಟಿಪ್ಪಣಿ ಬರೆಯುತ್ತಾರೆ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ‘ಮಂಕುತಿಮ್ಮನ ಕಗ್ಗ’ವು ಬಾಳಿಗೆ ದೀಪವಾಗಿದೆ. ಗಾದೆ ಮಾತುಗಳಂತೆ ಅನುಭವಾಮೃತವಾಗಿ ಜನಮಾನಸಕ್ಕೆ ಹತ್ತಿರವಾಗಿದೆ. | ಚರ್ಚೆಯಿಂದ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಲೇಖನ ತಯಾರಿಸುವುದು.<br><br>ತರಗತಿಯಲ್ಲಿ ಮಂಡಿಸಿ ಪರಿಷ್ಕರಿಸುವುದು, ಪಾಠಭಾಗದಲ್ಲಿ ಬಂದಿರುವ ನಾಮ ವಿಶೇಷಣ, ಭಾವನಾಮ ಮೊದಲಾದ ವ್ಯಾಕರಣಾಂಶಗಳನ್ನು ಗುರುತಿಸಿಕೊಳ್ಳುವುದು. ಪ್ರಯೋಗದ ಮೂಲಕ ಹೆಚ್ಚಿನ ಅರಿವನ್ನು ಗಳಿಸುವುದು.<br><br>ವಿದ್ಯಾರ್ಥಿಗಳು ಈ ಹಿಂದೆ ಓದಿದ ಕಗ್ಗದ ಪದ್ಯಗಳನ್ನು ನೆನಪಿಸಿ ಹೇಳುವುದು. ಅಗತ್ಯವಿದ್ದೆಡೆಯಲ್ಲಿ ಅಧ್ಯಾಪಕರು ನೆರವಾಗುವುದು.<br><br>ಪಾಠಭಾಗದಲ್ಲಿ ಬಂದಿರುವ ಕಗ್ಗದ ಪದ್ಯಗಳನ್ನು ವೈಯಕ್ತಿಕವಾಗಿ ಹಾಡುವುದು/ಧ್ವನಿ ಸುರುಳಿಯನ್ನು ಕೇಳಿಸುವುದು.<br><br>ಕಗ್ಗದ ಪದ್ಯಗಳ ಸಾರವನ್ನು ಬರೆಯುವುದು. ತರಗತಿಯಲ್ಲಿ ಓದಿ ಪರಿಷ್ಕರಿಸುವುದು. ಪದ ವಿಂಗಡಣೆ, ನವೀನ ಪದಗಳ ಅರ್ಥ, ಕಗ್ಗದಲ್ಲಿ ವ್ಯಕ್ತವಾದ ಜೀವನ ಮೌಲ್ಯಗಳ ಕುರಿತು ಕಿರು ಲೇಖನ ತಯಾರಿಸುವುದು. | • ಕಗ್ಗವನ್ನು ಓದಿ ಸಾರಾಂಶ ಬರೆಯುತ್ತಾರೆ.<br>• ಕಗ್ಗದಲ್ಲಿ ಬಂದಿರುವ ಜೀವನ ಮೌಲ್ಯಗಳನ್ನು ವಿಶ್ಲೇಷಿಸಿ ಕಿರುಲೇಖನ ತಯಾರಿಸುತ್ತಾರೆ. |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ದೃಶ್ಯ ಕಲೆಗಳಲ್ಲಿ ಒಂದಾಗಿರುವ ನಾಟಕಗಳಲ್ಲಿ ಸಾಮಾಜಿಕ ಮೌಲ್ಯಗಳು ಪ್ರಸ್ತಾಪನೆ | • ಜೀವನದ ವಿಭಿನ್ನ ಮುಖಗಳನ್ನು ಚಿತ್ರಿಸುತ್ತವೆಯೇ? (ನಾಟಕದ ತುಣುಕುಗಳನ್ನು ಪ್ರದರ್ಶಿಸುವುದು)<br>• ಚರ್ಚೆ–ಸಂವಾದದಲ್ಲಿ ತೊಡಗಿಸಿಕೊಳ್ಳುವುದು.<br>• ಚರ್ಚೆಯಲ್ಲಿ ತಾವು ಕಂಡುಕೊಂಡ ನಿಲುವುಗಳನ್ನು ಪ್ರಕಟಿಸುವುದು. ವಿದ್ಯಾರ್ಥಿಗಳಿಂದ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ತಮ್ಮ ವಿವರಣೆಗಳನ್ನು ಅಧ್ಯಾಪಕರ ಸಹಯದಿಂದ ನಿಗಮನಕ್ಕೆ ಬರುವುದು. ನಾಟಕದ ವಸ್ತು, ತಂತ್ರ, ಭಾಷೆ, ಶೈಲಿ ಮೊದಲಾದವುಗಳ ಕುರಿತಾಗಿ ಚರ್ಚೆಯಲ್ಲಿ ಬಂದಿರುವ ನಿಗಮನಗಳನ್ನು ಸೇರಿಸಿ ಟಿಪ್ಪಣಿ ತಯಾರಿಸುವುದು. | • ಚರ್ಚೆ, ಸಂವಾದಗಳಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯ. |
| ಪೌರಾಣಿಕ ಹಿನ್ನೆಲೆಯಿರುವ ಆಧುನಿಕ ನಾಟಕಗಳಲ್ಲಿ ವರ್ತಮಾನ ಕಾಲದ ಸತ್ಯಾಸತ್ಯದ ಪ್ರತಿಫಲನ | • ನಾಟಕದಲ್ಲಿ ಪ್ರಸ್ತುತವಾದ ಸತ್ಯಾಸತ್ಯಗಳನ್ನು ಕಂಡುಕೊಳ್ಳುವುದು ಕೆಲವು ಪೌರಾಣಿಕ ವಸ್ತುವನ್ನುಳ್ಳ ಆಧುನಿಕ ನಾಟಕಗಳನ್ನು ಅಧ್ಯಾಪಕರು ವಿದ್ಯಾರ್ಥಿಗಳ ಮುಂದಿಡುವುದು. ಕಥಾ ವಸ್ತುವಿನ ಕುರಿತಾದ ಸ್ಥೂಲ ಪರಿಚಯ ನೀಡುವುದು. (ಉದಾ:– ಬಿಂಬ–ಸ್ತ್ರೀವಾದ, ಯಯಾತಿ–ವಾರ್ಧಕ್ಯ ಸಮಸ್ಯೆ, ನಾಗಮಂಡಲ–ಬದುಕಿನ ಅಪೂರ್ಣತೆ) | |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ಪುರಾಣದ ಕಥೆಯಲ್ಲಿ ಅಡಗಿರುವ ವರ್ತಮಾನದ ಸತ್ಯ ಹಾಗೂ ಸಮಸ್ಯೆಗಳು ಬಕ ನಾಟಕದಲ್ಲಿ ಮೂರ್ತ ಸ್ವರೂಪ ತಾಳುತ್ತವೆ. | • ಪೌರಾಣಿಕ ಅಥವಾ ಜನಪದ ಹಿನ್ನೆಲೆಯನ್ನು ಒಳಗೊಂಡಿರುವ ಈ ನಾಟಕಗಳಲ್ಲಿ ವರ್ತಮಾನ ಕಾಲದ ಸತ್ಯ ಸಂಗತಿಗಳು ಪ್ರತಿಫಲಿಸುತ್ತಿವೆಯೇ?<br>• ಚರ್ಚೆ–ಸಂವಾದ. ನಾಟಕದ ವಸ್ತುವಿನ ಕುರಿತಾದ ವಿಶ್ಲೇಷಣೆ.<br>• ಬಕ ನಾಟಕದ ಓದುವಿಕೆ<br>• ನಾಟಕದ ವಸ್ತುವಿನ ಕುರಿತಾಗಿ ಸಂವಾದ. ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿಸಿ ನಾಟಕದ ಅಂಕಗಳನ್ನು ಹಂಚುವುದು.<br>• ಪ್ರತಿಯೊಂದು ಗುಂಪು ಅಂಕವನ್ನು ಓದಿ ವಸ್ತು, ಭಾಷೆ ಶೈಲಿ ವಿಶೇಷತೆಗಳನ್ನು ವಿಶ್ಲೇಷಿಸಿ ಟಿಪ್ಪಣಿ ತಯಾರಿಸುವುದು.<br>• ನಾಟಕದಲ್ಲಿ ಬಂದಿರುವ ಪಾತ್ರ ವೈವಿಧ್ಯಗಳನ್ನು ಗುರುತಿಸಿಕೊಂಡು ಪಾತ್ರ ಚಿತ್ರಣ ಮಾಡುವುದು, ಮಂಡನೆ, ಗುಂಪಿನಲ್ಲಿ ಮೌಲ್ಯ ಮಾಪನ, ಪರಿಷ್ಕರಣೆ<br>• ನಾಟಕದಲ್ಲಿ ಬಂದಿರುವ ಸ್ವಾರ್ಥಲಾಲಸೆ, ದಬ್ಬಾಳಿಕೆ, ಭ್ರಷ್ಟಾಚಾರ ಮೊದಲಾದವುಗಳ ಕುರಿತಾಗಿ ವಿದ್ಯಾರ್ಥಿಗಳ ಪ್ರತಿಕ್ರಿಯೆ. ಲೇಖನ, ಭಾಷಣ ಮುಂತಾದುವುಗಳ ಮೂಲಕ ತಮ್ಮ ಮನೋಭಾವವನ್ನು ಪ್ರಕಟಿಸುವುದು. | • ಪೌರಾಣಿಕ ಕಥಾನಕಗಳನ್ನು ಆಧುನಿಕ ಬದುಕಿಗೆ ಹೊಂದಿಸಿ ವಿಶ್ಲೇಷಿಸುವ ಸಾಮರ್ಥ್ಯವನ್ನು ಪಡೆಯುತ್ತಾರೆ.<br>• ನಾಟಕದ ವಸ್ತು, ಭಾಷೆ, ಶೈಲಿ, ಇವುಗಳನ್ನು ವಿವೇಚಿಸಿಕೊಂಡು ಟಿಪ್ಪಣಿ ರಚಿಸುತ್ತಾರೆ.<br>• ಪಾತ್ರ ವೈವಿಧ್ಯಗಳನ್ನು ಗುರುತಿಸಿಕೊಂಡು ಪಾತ್ರ ಚಿತ್ರಣ ಮಾಡುತ್ತಾರೆ.<br>• ಲೇಖನ/ಭಾಷಣ |

| ಪರಿಕಲ್ಪನೆ | ಕಲಿಕಾ ಪ್ರಕ್ರಿಯೆ, ಚಟುವಟಿಕೆಗಳು, ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ಗಾದೆ ಮಾತುಗಳು, ಆಡು ನುಡಿಯ ಬಳಕೆ, ನಾಟಕದ ಪರಿಣಾಮಕಾರಿ ಅಭಿವ್ಯಕ್ತಿಗೆ ಕಾರಣವಾಗುವುದು. | ● ಪೌರಾಣಿಕ ಹಿನ್ನೆಲೆಯಲ್ಲಿ ಸಮಕಾಲೀನ ಸಮಸ್ಯೆಗಳ ಚಿತ್ರಣದ ಕುರಿತಾದ, ವಿಶ್ಲೇಷಣಾತ್ಮಕ ಟಿಪ್ಪಣಿ ತಯಾರಿಸುವುದು. ಪರಸ್ಪರ ಮೌಲ್ಯಮಾಪನ.<br>● ನಾಟಕದ ಕೆಲವು ಭಾಗಗಳನ್ನು ಆಯ್ದು ತಮ್ಮಲ್ಲಿ ಹಂಚಿಕೊಂಡು ವಿದ್ಯಾರ್ಥಿಗಳು ತರಗತಿಯಲ್ಲಿ ಅಭಿನಯಿಸುವುದು<br>● ನಾಟಕದಲ್ಲಿ ಬಂದಿರುವ ಗ್ರಾಮ್ಯ ಭಾಷಾ ರೂಪದ ಸಂಭಾಷಣೆಯ ಭಾಗವನ್ನು ಗುರುತಿಸುವುದು.<br>● ಶಿಷ್ಟ ರೂಪಕ್ಕೆ ಪರಿವರ್ತಿಸಿ ಬರೆಯುವುದು.<br>● ಗ್ರಾಮ್ಯ ಭಾಷೆಯ ಔಚಿತ್ಯವನ್ನು ಕಂಡುಕೊಳ್ಳುವುದು.<br>● ನಾಟಕದಲ್ಲಿ ಪ್ರಯೋಗವಾಗಿರುವ ಗಾದೆ ಮಾತುಗಳನ್ನು ನಾಣ್ಣುಡಿಗಳನ್ನು ಗುರುತಿಸುವುದು.<br>● ಅವುಗಳ ಸಾಂದರ್ಭಿಕ ಅರ್ಥವನ್ನು, ಅರ್ಥ ವಿಶೇಷತೆಯನ್ನು ಗುರುತಿಸಿ ಭಾಷಾ ಪ್ರಯೋಗದಲ್ಲಿ ಅಳವಡಿಸಿಕೊಳ್ಳುವುದು. | ● ಅಭಿನಯ ಸಾಮರ್ಥ್ಯವನ್ನು ಗಳಿಸುತ್ತಾರೆ.<br>● ಗ್ರಾಮ್ಯ ಭಾಷೆಯಲ್ಲಿನ ಅರ್ಥ ಶಿಷ್ಟ ಕನ್ನಡಕ್ಕೆ ರೂಪಾಂತರಿಸುತ್ತಾರೆ.<br>● ಭಾಷಾ ಪ್ರಯೋಗಗಳಲ್ಲಿ ಅಳವಡಿಸಿಕೊಳ್ಳುತ್ತಾರೆ. |

# ಮೂಢನಂಬಿಕೆಗಳ ಬೀಡಿನಲ್ಲಿ

– ಭುವನೇಶ್ವರಿ ಹೆಗಡೆ

## ಪ್ರವೇಶ

ಮೂಢನಂಬಿಕೆಗಳು ಪ್ರಾಚೀನ ಕಾಲದಿಂದ ತೊಡಗಿ ಆಧುನಿಕ ಕಾಲದ ವರೆಗಿನ ಜನರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಒಂದು ಅಂಶವಾಗಿದೆ. ಅವು ಜನತೆಯ ಜೀವನಾನುಭವದ ಮೂಸೆಯಿಂದ ಮೂಡಿ ಬಂದು, ಬದುಕಿನಲ್ಲಿ ಬೆರೆತು, ಪರಿಣಾಮಕಾರಿಯಾಗಿ ಪ್ರಭಾವ ಬೀರಿ ಜೀವಂತವಾಗಿವೆ. ಜನರ ಭಾವನೆಗಳ ಅಭಿವ್ಯಕ್ತಿಗಳಾದ ಈ ನಂಬಿಕೆಗಳು ಜನರ ಬದುಕನ್ನೆ ನಿಯಂತ್ರಿಸಿ ನಿರ್ದೇಶಿಸುವ ಪ್ರಮುಖ ಶಕ್ತಿಯಾಗಿ ಪರಿಣಮಿಸಿವೆ. ಮನುಷ್ಯನು ಹಿರಿಯರ ಉಪದೇಶಗಳನ್ನು ಪಾಲಿಸಿ ಅವು ನಂಬಿಕೆಗಳಾಗಿ, ಮೂಢನಂಬಿಕೆಗಳಾಗಿ ಆತನ ಬಾಳಿನ ಒಂದಂಗವೆಂಬಂತೆ ಪರಿವರ್ತಿತವಾಗಿವೆ. ಜೀವನದಲ್ಲಿ ಬೆರೆತು ಸಮಷ್ಟಿ ಪ್ರಜ್ಞೆಯನ್ನು ಮೆರೆಯುವ ಜನಪದ ಸಂಸ್ಕೃತಿಯ ಪ್ರಮುಖ ಅಂಗವೆಂದು ಅದನ್ನು ಹೇಳಬಹುದು.

ಮೂಢನಂಬಿಕೆ ಎಂದರೆ ಮೌಢ್ಯದಿಂದ ಕೂಡಿದ ನಂಬಿಕೆ. ಅಂದರೆ ಸತ್ಯದ ತಳಹದಿಯಿಲ್ಲದೆ ಒಂದು ವಿಷಯವನ್ನೋ ಅಥವಾ ವಸ್ತುವನ್ನೋ ಇಲ್ಲವೆ ವ್ಯಕ್ತಿಯನ್ನೋ ನಂಬಿಕೊಂಡು ಬಂದಿರುವುದು ಮೂಢನಂಬಿಕೆ. ಎಲ್ಲಾ ಕಾಲಕ್ಕೂ ಎಲ್ಲಾ ದೇಶಗಳಲ್ಲೂ ಎಲ್ಲಾ ಜನರು ಒಂದಲ್ಲ ಒಂದು ರೀತಿಯ ಮೂಢನಂಬಿಕೆಗಳನ್ನು ರೂಢಿ ಮಾಡಿಕೊಂಡಿರುತ್ತಾರೆ. ಏಕೆಂದರೆ ಎಲ್ಲ ಜನರಿಗೂ ಸತ್ಯದ ಅರಿವಿರುವುದಿಲ್ಲ. ವಿಚಾರವಂತರಲ್ಲದವರಿಗೆ ಮೂಢ ನಂಬಿಕೆ ಒಂದು ಆಧಾರ ಸ್ತಂಭ. ಅದು ಇರುವುದರಿಂದಲೇ ಅವರು ತಮ್ಮ ಜೀವನವನ್ನು ನಡೆಸುತ್ತಾರೆ. ಅದರ ಆಧಾರದ ಮೇಲೆ ಅವರು ತಮ್ಮ ಮಾನಸಿಕ ಸಮತೋಲನವನ್ನು ಕಂಡುಕೊಳ್ಳುತ್ತಾರೆ. ಯಾವುದೋ ಒಂದನ್ನು ನಂಬುವುದರಿಂದ ಅವರಿಗೆ ಸುಖ, ಶಾಂತಿ, ನೆಮ್ಮದಿ, ಸಂತೋಷಗಳು ಸಿಗುತ್ತವೆ.

ಭುವನೇಶ್ವರಿ ಹೆಗಡೆ ಅವರ 'ಮೂಢನಂಬಿಕೆಗಳ ಬೀಡಿನಲ್ಲಿ' ಲೇಖನವು ಮೂಢನಂಬಿಕೆಗಳ ಕುರಿತಾದ ವೈಚಾರಿಕ ಪ್ರಬಂಧವಲ್ಲ. ಮೂಢನಂಬಿಕೆಗಳನ್ನು ಒಪ್ಪಿಕೊಳ್ಳುವ ಅಥವಾ ಸಾರಾಸಗಟಾಗಿ ತಿರಸ್ಕರಿಸುವ ಧೋರಣೆಯನ್ನು ಈ ಬರಹದಲ್ಲಿ ಲೇಖಕಿ ಪ್ರತಿಪಾದಿಸುವುದಿಲ್ಲ. ಜನಪದರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಹಲವಾರು ನಂಬಿಕೆಗಳತ್ತ ನಗೆ ನೋಟಗಳನ್ನು ಬೀರುವ ಪ್ರಯತ್ನದೊಂದಿಗೆ ಆಧುನಿಕ ಸಮಾಜದ ದರ್ಶನವನ್ನು ಇಲ್ಲಿ ಕಾಣಬಹುದು.

ಮೂಢನಂಬಿಕೆಗಳ ಕುರಿತಾದ ವಿಚಾರಗಳನ್ನು ವಿದ್ಯಾರ್ಥಿಗಳು ಪುಸ್ತಕದ ಮೂಲಕವಾಗಿ ಅಥವಾ ಮನೆಯವರಿಂದ ಇಲ್ಲವೇ ಹಿರಿಯರಿಂದ ತಿಳಿದಿರಬಹುದು. ತಮ್ಮ ಸುತ್ತಮುತ್ತಲ ಪರಿಸರದಲ್ಲಿ ಪ್ರಚಲಿತದಲ್ಲಿರುವ ಮೂಢನಂಬಿಕೆಗಳ ವಿಚಾರ ವಿದ್ಯಾರ್ಥಿಗಳಿಗೆ ತಿಳಿದಿರುತ್ತದೆ. ಅದನ್ನು ಬಾಯ್ದೆರೆಯಾಗಿ ಹೇಳುವಂತೆ ವಿದ್ಯಾರ್ಥಿಗಳಲ್ಲಿ ಅಧ್ಯಾಪಕರು ಸೂಚಿಸುವುದು. ವಿದ್ಯಾರ್ಥಿಗಳು ತಾವು ಅರಿತಿರುವ ಮೂಢನಂಬಿಕೆಗಳ ಕುರಿತು ಬಾಯ್ದೆರೆಯಾಗಿ ಹೇಳಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿ. ಮೂಢ ನಂಬಿಕೆಯಿಂದಾಗಿ ತಮ್ಮ ಜೀವನದಲ್ಲಿ ಘಟಿಸಿದ ರಸವತ್ತಾದ ಅನುಭವಗಳಿದ್ದಲ್ಲಿ ಅವುಗಳನ್ನು ಸ್ವಾರಸ್ಯಕರವಾಗಿ ಮಂಡಿಸುವಂತೆ ಸೂಚಿಸುವುದು. 'ಮೂಢನಂಬಿಕೆಗಳ ಬೀಡಿನಲ್ಲಿ' ಪಾಠವನ್ನು ಮೌನವಾಗಿ ಓದಲು ನಿರ್ದೇಶಿಸುವುದು. ಪದ ವಿಂಗಡಣೆ ಹಾಗೂ ವಿಗ್ರಹವಾಕ್ಯದಲ್ಲಿ ಪ್ರಯೋಗಿಸಬಹುದಾದ ಪದಗಳನ್ನು ಗುರುತಿಸಿ ಲೋಗ್‌ಬುಕ್ಕಿನಲ್ಲಿ ಬರೆದುಕೊಳ್ಳುವಂತೆ ಸೂಚಿಸುವುದು.

**ಪದ ವಿಂಗಡಣೆ**

| | | |
|---|---|---|
| ಅರಮನೆಯಿತ್ತು | – | ಅರಮನೆ + ಇತ್ತು |
| ನಾಲ್ಕೈದು | – | ನಾಲ್ಕು + ಐದು |
| ತದ್ವಿರುದ್ಧ | – | ತತ್ + ವಿರುದ್ಧ |
| ರೊಚ್ಚಿಗೆಬ್ಬಿಸು | – | ರೊಚ್ಚಿಗೆ + ಎಬ್ಬಿಸು |
| ಎಲ್ಲಿಗಿರಬಹುದು | – | ಎಲ್ಲಿಗೆ + ಇರಬಹುದು |
| ಅವರೆದುರು | – | ಅವರ + ಎದುರು |
| ನಂಬಿಗೆಯೊಂದನ್ನು | – | ನಂಬಿಗೆ + ಒಂದನ್ನು |
| ರೋಮಾಂಚನವಾಗು | – | ರೋಮಾಂಚನ + ಆಗು |
| ನಾಚಿಕೆಯಿಲ್ಲದೆ | – | ನಾಚಿಕೆ + ಇಲ್ಲದೆ |

**ವಿಗ್ರಹ ವಾಕ್ಯ**

| | | |
|---|---|---|
| ಅರಮನೆ | – | ಅರಸನ ಮನೆ |
| ರಾಜಮನೆತನ | – | ರಾಜನ ಮನೆತನ |
| ರಾಜಕುಮಾರ | – | ರಾಜನ ಕುಮಾರ |
| ಸೂರ್ಯಚಂದ್ರರು | – | ಸೂರ್ಯನೂ ಚಂದ್ರನೂ |
| ಅಕ್ಕಿಆರಿಸು | – | ಅಕ್ಕಿಯನ್ನು ಆರಿಸು |

## ಸ್ವಾರಸ್ಯ ಬರೆಯುವುದು

ವಿದ್ಯಾರ್ಥಿಗಳು ಪಾಠಭಾಗವನ್ನು ಮೌನವಾಗಿ ಓದಲಿ. ಓದುವ ಸಂದರ್ಭದಲ್ಲಿ ಪಾಠಭಾಗದ ಸ್ವಾರಸ್ಯಕರವಾದ ವಿಚಾರಗಳನ್ನು ಗುರುತಿಸಿಕೊಳ್ಳಲಿ. ಬಳಿಕ ವಿದ್ಯಾರ್ಥಿಗಳು ತಾವು ಬರೆದ ವಿಚಾರಗಳ ಕುರಿತು ಚರ್ಚಿಸಲಿ. ಆ ಮೂಲಕ ಪಾಠಭಾಗದ ಒಟ್ಟು ಆಶಯವನ್ನು ಕ್ರೋಡೀಕರಿಸಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಚರ್ಚೆಯ ಬಳಿಕ ಪರಿಷ್ಕರಿಸಿ ಎಲ್ಲರೂ ಬರೆಯಲಿ. ವಿದ್ಯಾರ್ಥಿಗಳ ಬರವಣಿಗೆಯ/ಮಂಡನೆಯ ವೇಳೆ ಈ ಕೆಳಗಿನ ಅಂಶಗಳು ಅಡಕವಾಗಿರುವಂತೆ ಗಮನಹರಿಸಬೇಕು.

- ಅರಮನೆಯ ಪಹರೆಯವನ ಕೆಲಸ ವಿಚಾರ
- ಕುಂಬಳಕಾಯಿಯ ಕಥೆ
- ಹಕ್ಕಿಯ ಕೂಗಿನ ಭಯ
- ಪ್ರಳಯದ ಕುರಿತಾದ ನಂಬಿಕೆ
- ಗ್ರಹಣದ ಕುರಿತಾದ ಜನಪದರ ನಂಬಿಕೆ
- ನೆಂಟರು ಬರುವ ಮುನ್ಸೂಚನೆ

## ಪಟ್ಟಿ ತಯಾರಿಸುವುದು

ಪಾಠಭಾಗದಲ್ಲಿ ಬಂದ ಮೂಢ ನಂಬಿಕೆಗಳ ಹೊರತಾಗಿ ನಮ್ಮ ಪರಿಸರದಲ್ಲಿ ಪ್ರಚುರವಾಗಿರುವ ಮೂಢನಂಬಿಕೆಗಳ ಪಟ್ಟಿಯನ್ನು ತಯಾರಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಪ್ರತಿಯೊಬ್ಬ ವಿದ್ಯಾರ್ಥಿಯು ತಾವು ತಂದ ನಂಬಿಕೆಗಳ ಪಟ್ಟಿಯನ್ನು ಓದಲಿ. ವಿದ್ಯಾರ್ಥಿಗಳ ಸಂಗ್ರಹದಲ್ಲಿ ಈ ಕೆಳಗಿನ ಮೂಢನಂಬಿಕೆಗಳನ್ನೂ ನಿರೀಕ್ಷಿಸಬಹುದು.

- ಸಂಜೆ ಆದ ಮೇಲೆ ಉಗುರು ಕತ್ತರಿಸಿಕೊಳ್ಳಬಾರದು.
- ಸಂಜೆ ಹೊತ್ತಿನಲ್ಲಿ ಎಲ್ಲರೂ ಮಾತನಾಡುತ್ತಿರುವಾಗ ಹಲ್ಲಿ ನುಡಿದರೆ ಆ ಮಾತು ಸತ್ಯವಾಗುತ್ತದೆ.
- ಮನೆಯಲ್ಲಿ ಯಾರಿಗಾದರೂ ಬಿಕ್ಕಳಿಕೆ ಬಂದರೆ, ಅವರನ್ನು ಯಾರೋ ನೆನಪು ಮಾಡಿಕೊಳ್ಳುತ್ತಿದ್ದಾರೆ ಎಂದರ್ಥ.
- ಮನೆಯ ಮಾಳಿಗೆ ಮೇಲಿನ ಕಾಗೆ ಸ್ವಲ್ಪ ಜಾಸ್ತಿ ಹೊತ್ತು ಕಾ ಕಾ ಅಂತ ಕೂಗಿದರೆ ಊರಿನಿಂದ ಯಾರೋ ನೆಂಟರು ಬರುತ್ತಾರೆ ಎಂದರ್ಥ.
- ತುಂಬಿದ ಕೊಡ ಹೊತ್ತುಕೊಂಡು ಮುತ್ತೈದೆಯೊಬ್ಬಳು ಎದುರಿಗೆ ಬಂದರೆ ಅದು ಶುಭ ಸೂಚನೆ.

- ದಾರಿಯಲ್ಲಿ ಸಂಚರಿಸುವಾಗ ಬೆಕ್ಕು ಅಡ್ಡ ಬಂದರೆ ಅದು ಅಶುಭ ಸೂಚನೆ. ಅಂದು ಹೋದ ಕೆಲಸ ನಡೆಯುವುದಿಲ್ಲ.
- ಪುರುಷರಿಗೆ ಬಲಗಣ್ಣು ಹಾಗೂ ಸ್ತ್ರೀಯರಿಗೆ ಎಡಗಣ್ಣು ಹಾರಿದರೆ ಒಳ್ಳೆಯದು.
- ಹುಟ್ಟಿದ ದಿನ ಮತ್ತು ಅಮವಾಸ್ಯೆಯ ದಿನ ಕ್ಷೌರ ಮಾಡಿಸಬಾರದು.
- ಮೈಮೇಲೆ ಹಲ್ಲಿ ಬಿದ್ದರೆ ಹಲವು ಶಕುನಗಳಿವೆ. ಹಾಗಾದರೆ ಕೂಡಲೇ ಬೇವಿನ ಮರ ನೋಡಬೇಕಂತೆ.
- ಬೆಳಗಿನ ಜಾವ ಬರುವ ಕನಸುಗಳು ಸತ್ಯವಾಗುತ್ತವೆ.
- ಚಿಕ್ಕ ಮಕ್ಕಳು ಅತಿಯಾಗಿ ಹಠ ಮಾಡುತ್ತಿದ್ದರೆ ಮಗುವಿನ ದೃಷ್ಟಿ ತೆಗೆದರೆ ಸಮಸ್ಯೆ ಪರಿಹಾರವಾಗುತ್ತದೆ.
- ದಕ್ಷಿಣ ದಿಕ್ಕಿಗೆ ತಲೆಮಾಡಿ ಮಲಗಕೂಡದು.
- ಸಕಾಲದಲ್ಲಿ ಮಳೆ ಬರದಿದ್ದರೆ ಕತ್ತೆಗಳ ಪೂಜೆ ಮಾಡಿದರೆ ಒಳ್ಳೆಯದು.
- ಸಂಜೆಯಾದ ನಂತರ ಕಸ ಹೊರಚೆಲ್ಲಬಾರದು.

**ಸಂಕ್ಷಿಪ್ತವಾಗಿ ಬರೆಯುವುದು**

- **ಪ್ರಳಯ ಉಂಟಾಗುವುದರ ಮುನ್ಸೂಚನೆ ದೊರಕುವ ಸನ್ನಿವೇಶ**

❑ ಭೂಮಿಯನ್ನು ಹೊತ್ತು ಹೊತ್ತು ಬೇಸರವಾದಾಗ ಆದಿಶೇಷನು ಹೆಡೆಯನ್ನು ಅಲ್ಲಾಡಿಸುತ್ತಾನೆ. ಆಗ ಭೂಕಂಪವಾಗುತ್ತದೆ. ಹಾಗೆಯೇ ಅವನು ಹೆಡೆಯನ್ನು ನೀರಿನಲ್ಲಿ ಮುಳುಗಿಸಿದರೆ ಭೂಮಿ ನೀರಿನಲ್ಲಿ ಮುಳುಗಿ ಪ್ರಳಯವಾಗುತ್ತದೆ ಎಂಬುದು ಜನರ ನಂಬಿಕೆ. ಎಲ್ಲರ ಮನೆಯ ಮಜ್ಜಿಗೆಯಲ್ಲಿ ಬೆಣ್ಣೆಯ ಮುದ್ದೆ ಯಾವ ದಿನ ಪೂರ್ತಿ ಮುಳುಗುತ್ತದೆಯೋ ಅದೇ ದಿನ ಪ್ರಳಯವಾಗುತ್ತದೆ ಎಂಬ ನಂಬಿಕೆಯ ಕಥೆಯನ್ನು ಈ ಲಲಿತ ಪ್ರಬಂಧದಲ್ಲಿ ಮಾಸ್ತರರು ವಿದ್ಯಾರ್ಥಿಗಳಿಗೆ ಹೇಳಿರುತ್ತಾರೆ. ಇದನ್ನು ತಿಳಿದ ವಿದ್ಯಾರ್ಥಿಯೊಬ್ಬ ಮಾಸ್ತರರ ಮೇಲಿನ ಸಿಟ್ಟಿನಿಂದ ತನ್ನ ತಮ್ಮನ ಜತೆಗೂಡಿ ಬೆಣ್ಣೆಯನ್ನು ಕದ್ದು ತಿನ್ನುತ್ತಾನೆ. ಅಣ್ಣ ತಮ್ಮಂದಿರು ಬೆಣ್ಣೆ ಕದ್ದು ತಿಂದ ಈ ಸನ್ನಿವೇಶದೊಂದಿಗೆ ಸ್ವಾರಸ್ಯಕರವಾಗಿ ನಿರೂಪಿಸುವುದು. ಈ ಕೆಳಗಿನ ಅಂಶಗಳು ಉತ್ತರದಲ್ಲಿರಬೇಕು.

  - ♦ ಮಾಸ್ತರರ ಪ್ರಳಯದ ಕತೆ
  - ♦ ಪ್ರಳಯದ ಕುರಿತಾದ ಅಣ್ಣ ತಮ್ಮಂದಿರ ಯೋಚನಾ ಲಹರಿ
  - ♦ ಅಣ್ಣ ತಮ್ಮಂದಿರು ಕದ್ದು ಬೆಣ್ಣೆ ತಿಂದ ಕತೆ

- ನಂಬಿಕೆಗಳ ಕುರಿತು ಲೇಖಕಿಯ ನಿಲುವು.

❑ ನಮ್ಮ ಸಮಾಜದಲ್ಲಿ ಎಷ್ಟು ಮಂದಿಯಿದ್ದಾರೆಯೋ ಅಷ್ಟೇ ನಂಬಿಕೆಗಳಿವೆ ಎನ್ನಬಹುದು. ಹಳೆಯ ತಲೆಮಾರಿನಿಂದ ಬಂದ ಈ ನಂಬಿಕೆಗಳೆಲ್ಲ ಮೂಢ ನಂಬಿಕೆಗಳೇ? ಅವುಗಳಲ್ಲಿ ವೈಜ್ಞಾನಿಕತೆಯಿದೆಯೇ? ಅವು ನಮ್ಮ ಪ್ರಗತಿಗೆ ಪೂರಕವೇ? ಈ ಪ್ರಶ್ನೆಗಳ ಬಗೆಗೆ ಲೇಖಕಿ ತಾನು ತಲೆಕೆಡಿಸಿಕೊಳ್ಳುವುದಿಲ್ಲ ಎನ್ನುತ್ತಾರೆ. ಅವರ ದೃಷ್ಟಿಯಲ್ಲಿ ಈ ನಂಬಿಕೆಗಳು ದಿನನಿತ್ಯದ ಬದುಕಿನಲ್ಲಿ ಆತ್ಮೀಯವಾಗಿ ಹೊಂದಿಕೊಂಡಿವೆ. ಜನಪದದ ಬದುಕಿನಲ್ಲಿ ಇವು ಬೆರೆತು ಹೋಗಿವೆ. ಇವುಗಳ ಮೇಲೆ ಸುಧಾರಣೆಯ ಗಾಳಿ ಬೀಸಿ ಅವು ಮರೆಯಾಗುವ ಹಾಗೆ ಆಗಬಾರದು. ಇವು ನಮ್ಮ ಬದುಕಿನಿಂದ ದೂರವಾದರೆ ಬದುಕು ನೀರಸವಾಗುತ್ತದೆ. ಬದುಕಿಗೆ ಅರ್ಥವೇ ಇರುವುದಿಲ್ಲ. ಇದು ನಮ್ಮೊಡನೆ ಹೊಂದಿಕೊಂಡಿರುವ ಅಸಂಖ್ಯಾತ ನಂಬಿಕೆಗಳ ಬಗೆಗೆ ಲೇಖಕಿ ತಳೆದ ನಿಲುವು.

### ಹಾಸ್ಯಲೇಖನ/ಹರಟೆ ಬರೆಯುವುದು

'ಮೂಢನಂಬಿಕೆಗಳ ಬೀಡಿನಲ್ಲಿ' ಲೇಖನವನ್ನು ಓದಿದ ಬಳಿಕ ವಿದ್ಯಾರ್ಥಿಗಳಿಗೆ ಹರಟೆಯ, ಹಾಸ್ಯ ಬರಹದ ಸ್ಪಷ್ಟ ಚಿತ್ರ ದೊರಕಿರುತ್ತದೆ. ಹಾಸ್ಯ/ಹರಟೆ ಬರವಣಿಗೆಯ ಕೌಶಲವುಳ್ಳ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ತರಗತಿಯಲ್ಲಿರಬಹುದು. ಅವರಿಂದ ಹಾಸ್ಯ/ಹರಟೆಯನ್ನು ಬರೆಸುವುದು.

### ವೈಜ್ಞಾನಿಕ ಲೇಖನ–ಸಂವಾದ

ಮೂಢನಂಬಿಕೆಗಳ ಕುರಿತು ಜಾನಪದೀಯ ನಿಲುವು ಹಾಗೂ ವೈಜ್ಞಾನಿಕ ನಿಲುವುಗಳನ್ನು ಹೋಲಿಸಿ ಪ್ರಬಂಧವೊಂದನ್ನು ಸಿದ್ಧಪಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಗಂಡಿಸುವುದು. ಒಂದು ಗುಂಪು ಮೂಢನಂಬಿಕೆಗಳ ಕುರಿತಾದ ಜನಪದ ನಿಲುವಿನ ಬಗ್ಗೆಯೂ ಇನ್ನೊಂದು ಗುಂಪು ವೈಜ್ಞಾನಿಕ ನಿಲುವಿನ ಬಗ್ಗೆಯೂ ಲೇಖನ ಸಿದ್ಧಪಡಿಸುವಂತೆ ಸೂಚಿಸುವುದು. ಗುಂಪಿನ ನಾಯಕರಿಗೆ ಪ್ರಬಂಧವನ್ನು ಮಂಡಿಸುವಂತೆ ಹೇಳುವುದು. ಮೂಢನಂಬಿಕೆಯ ಕುರಿತಾದ ಜಾನಪದ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ಪರ ಹಾಗೂ ವಿರುದ್ಧವಾದಗಳ ಚರ್ಚೆ ನಡೆಸುವುದು. ಚರ್ಚೆಯ ಮುಖ್ಯಾಂಶಗಳನ್ನು ಗುರುತಿಸಿ ವರದಿ ತಯಾರಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಚರ್ಚೆಯಲ್ಲಿ ಬಂದ ವಿಚಾರಗಳನ್ನು ಕ್ರೋಡೀಕರಿಸುವುದು. ವಿದ್ಯಾರ್ಥಿ ಲೋಗ್ ಬುಕ್‌ಗೆ ಸೇರಿಸಿಕೊಳ್ಳುವುದು.

### ಮೂಢನಂಬಿಕೆಗಳ ಬಗೆಗೆ ಜನಪದ ನಿಲುವು ಮತ್ತು ವೈಜ್ಞಾನಿಕ ನಿಲುವು

ಮಾನವನ ಜೀವನದಲ್ಲಿ ಸಂತೋಷ, ಉತ್ಸಾಹ, ವಿಸ್ಮಯ, ಕುತೂಹಲ ಎಲ್ಲವೂ ಇರುವಾಗ ಅವೆಲ್ಲದರ ಜತೆಗೆ ಮೂಢನಂಬಿಕೆಯೂ ಅಂಟಿಕೊಂಡಿದೆ. ಮೂಢನಂಬಿಕೆಗಳು ಅವಿದ್ಯಾವಂತ ಮುಗ್ಧರಲ್ಲಿ ಹೆಚ್ಚು ಗಾಢವಾಗಿ

ಬೆಳೆದಿದೆ. ಜನಮನದಲ್ಲಿ ಆಳವಾಗಿ ಬೇರು ಬಿಟ್ಟಿರುವ ಮೂಢನಂಬಿಕೆಗಳನ್ನು ಹೋಗಲಾಡಿಸುವುದು ಕಠಿಣವಾದ ಕೆಲಸ. ಮೂಢನಂಬಿಕೆಗಳಿಗೆ ಅಜ್ಞಾನವೇ ಮೂಲ. ಬೆಕ್ಕು ಅಡ್ಡ ಬಂದರೆ, ಹಲ್ಲಿ ಲೊಚಗುಟ್ಟಿದರೆ, ಹೊರಗೆ ಹೊರಟಾಗ ಎಲ್ಲಿಗೆ ಹೊರಟೆ? ಎಂದು ಪ್ರಶ್ನಿಸಿದರೆ, ಕಣ್ಣು ಅದುರಿದರೆ–ಹೀಗೆ ನೂರಾರು ಮೂಢನಂಬಿಕೆಗಳು ರೂಢಿಯಲ್ಲಿವೆ.

ಮನುಷ್ಯ ಜ್ಞಾನಿಯಾಗಿ ತನ್ನಲ್ಲಿರುವ ಅನೇಕ ಅಜ್ಞಾನಗಳನ್ನು ಹೋಗಲಾಡಿಸಿಕೊಂಡಿದ್ದರೂ ಮೂಢನಂಬಿಕೆಗಳಿಂದ ಬಿಡುಗಡೆ ಹೊಂದಿಲ್ಲ. ಇದು ವಿದ್ಯಾವಂತರು, ಬುದ್ಧಿವಂತರನ್ನೂ ಬಿಡದೆ ಆವರಿಸಿದೆ. ಮೂಢನಂಬಿಕೆಗಳು ಮನುಷ್ಯನ ನೈತಿಕ ನೆಲೆ, ಧರ್ಮ, ವಿಚಾರ, ವಿಮರ್ಶೆಗಳನ್ನು ಕುಂಠಿತಗೊಳಿಸುತ್ತವೆ. ಭಯ, ಅಜ್ಞಾನ, ಮನಸ್ಸಿನ ದೌರ್ಬಲ್ಯ ಇವುಗಳೇ ಮೂಢನಂಬಿಕೆಗಳ ತಾಯಿ ಬೇರು.

ನಮ್ಮ ಜೀವನದಲ್ಲಿ ವಿವಿಧ ಆಚಾರ ವಿಚಾರಗಳು ಮನೆ ಮಾಡಿವೆ. ಹಿಂದಿನ ತಲೆಮಾರಿನ ಜನರಿಗೆ ಅವೆಲ್ಲಾ ಅಗತ್ಯವಾಗಿ ಬೇಕಾಗಿದ್ದುವು. ಯಾವುದೋ ಸಂದರ್ಭದಲ್ಲಿ ನಡವಳಿಕೆಯನ್ನು ತಿದ್ದಲು ಇಂತಹ ವಿಚಾರಗಳು ಅವರಿಗೆ ಹೊಳೆದಿರಬೇಕು. ನಮ್ಮ ಜನಪದದಲ್ಲಿ ಅವು ಇಂದಿಗೂ ಸ್ಥಿರವಾಗಿವೆ. ಈಗಿನ ವಿದ್ಯಾವಂತರು, ಬುದ್ಧಿ ಜೀವಿಗಳು ಅನಿಸಿಕೊಂಡ ಕೆಲವರಿಗೆ ಬೇರೆಯವರ ವಿಚಾರಗಳ ಬಗ್ಗೆ ಖಂಡನೆ ಮಾಡಬೇಕೆನ್ನಿಸುವುದು ಸಹಜ. ಆದರೂ ಇತರರ ಭಾವನೆಗಳಿಗೂ ಬೆಲೆಕೊಡಬೇಕಾದುದು ಪ್ರಜಾಪ್ರಭುತ್ವದಲ್ಲಿ ಬಹಳ ಮುಖ್ಯ ಸಂಗತಿ. ಒಬ್ಬನ ಅಭಿಪ್ರಾಯವನ್ನು ಸಮುದಾಯದ ಮೇಲೆ ಹೇರಬಾರದು. ಅದರ ಬದಲಿಗೆ ಸಮುದಾಯ ಜೀವನಕ್ರಮವು ಎಲ್ಲರ ಜೀವನಕ್ರಮವಾಗಬೇಕು.

ಜನಪದರು ಸಂಪ್ರದಾಯದ ಚೌಕಟ್ಟಿನಲ್ಲಿ ನಂಬಿಕೆಗಳನ್ನು ಇಟ್ಟು ನಡೆಸಿಕೊಂಡು ಬಂದಿರುತ್ತಾರೆ. ವೈಜ್ಞಾನಿಕ ಪ್ರಕ್ರಿಯೆಗಳಲ್ಲಿ ಆಸಕ್ತಿಯುಳ್ಳವರಿಗೆ ಇದು ಹಿಡಿಸುವುದಿಲ್ಲ. ಅವರು ಪ್ರತಿಯೊಂದನ್ನು ವಿಜ್ಞಾನದ ತಕ್ಕಡಿಯಲ್ಲಿಟ್ಟೇ ತೂಗಲು ಬಯಸುತ್ತಾರೆ.

ಜನಪದರ ನಂಬಿಕೆಗಳ ಹಿಂದೆ ವೈಜ್ಞಾನಿಕ ಸತ್ಯವೂ ಅಡಗಿರುತ್ತದೆ. ಉದಾಹರಣೆಗೆ 'ಗ್ರಹಣ'ದ ವೇಳೆ ಆಹಾರ ತಿನ್ನಬಾರದು ಎಂಬುದು ಜನಪದ ನಂಬಿಕೆ. ಆದರೆ ವಿಜ್ಞಾನದ ದೃಷ್ಟಿಯಲ್ಲಿ ಅದು ಹಾಗಲ್ಲ. ಗ್ರಹಣದ ವೇಳೆ ಸೂರ್ಯನ ಬೆಳಕು ಇರುವುದಿಲ್ಲ. ಸೂರ್ಯ ಪ್ರಕಾಶ ಇರುವ ವೇಳೆ ಆಹಾರವು ಹಳಸುವಂತೆ ಮಾಡುವ ಸಾಮರ್ಥ್ಯವುಳ್ಳ ಕ್ರಿಮಿಗಳು ನಾಶಗೊಂಡು ಆಹಾರ ತಿನ್ನಲು ಯೋಗ್ಯವಾಗಿರುತ್ತದೆ. ಸೂರ್ಯ ಪ್ರಕಾಶ ಇಲ್ಲದಿದ್ದಾಗ ಈ ಸೂಕ್ಷ್ಮಾಣುಗಳು ಆಹಾರದೊಂದಿಗೆ ಸೇರಿ ಮನುಷ್ಯನ ಶಾರೀರಿಕ ಆರೋಗ್ಯವನ್ನು ಕೆಡಿಸಬಹುದು. ಇದೇ ರೀತಿ ಅಶ್ವತ್ಥ ಮರ ಪೂಜೆ, ಪ್ರದಕ್ಷಿಣೆಯನ್ನು ವಿವಿಧ ನಂಬಿಕೆಗಳ ಹಿನ್ನೆಲೆಯಲ್ಲಿ ಜನಪದರು ಆಚರಿಸಿಕೊಂಡು ಬಂದಿದ್ದಾರೆ. ಆದರೆ ವೈಜ್ಞಾನಿಕ ದೃಷ್ಟಿಕೋನವೇ ಬೇರೆ. ಅಶ್ವತ್ಥ ಮರದ ಎಲೆಗಳು ಅತೀ ಹೆಚ್ಚು ಆಮ್ಲಜನಕವನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತವೆ. ಇದರಿಂದ ವಾತಾವರಣದಲ್ಲಿ ಆಮ್ಲ ಜನಕದ ಪ್ರಮಾಣ ಹೆಚ್ಚಾಗಿ ವಾಯು ಮಾಲಿನ್ಯ ಕಡಿಮೆಯಾಗುತ್ತದೆ. ಈ ಕಾರಣದಿಂದ ಇದು ಆರೋಗ್ಯವನ್ನು ಹೆಚ್ಚಿಸುತ್ತದೆ ಎಂಬುದು ವೈಜ್ಞಾನಿಕ ಸತ್ಯ.

## ಹಾಸ್ಯ ಸಾಹಿತಿಗಳ ಮಾಹಿತಿ ಸಂಗ್ರಹ

ಕನ್ನಡ ಭಾಷೆಯಲ್ಲಿ ಧಾರಾಳ ಮಂದಿ ಹಾಸ್ಯ ಬರಹಗಳನ್ನು ಬರೆದವರಿದ್ದಾರೆ. ಇಂತಹ ಸಾಹಿತಿಗಳ ಮಾಹಿತಿಗಳನ್ನು ಹಾಗೂ ಅವರು ಬರೆದ ಕೃತಿಗಳನ್ನು ಪಟ್ಟಿ ಮಾಡುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಗ್ರಂಥಾಲಯದ ಸಹಾಯದಿಂದ ಈ ಸಾಹಿತಿಗಳ ಲೇಖನಗಳನ್ನು ಓದುವಂತೆ ನಿರ್ದೇಶಿಸುವುದು.

### ಬೀಚಿ

ಬೀಚಿ (1913–1980) ವೈಶಿಷ್ಟ್ಯಪೂರ್ಣ ಹಾಸ್ಯ ಬರಹಗಳಿಗೆ ಮತ್ತೊಂದು ಹೆಸರು.

| | | |
|---|---|---|
| ಜನನ | : | ಎಪ್ರಿಲ್ 23, 1913. |
| ಪೂರ್ತಿ ಹೆಸರು | : | ರಾಯಸಂ ಭೀಮಸೇನ ರಾವ್ |
| ನೌಕರಿ | : | ಪೊಲೀಸ್ ಇಲಾಖೆಯಲ್ಲಿ ಅಟೆಂಡರ್–ಸ್ಪೆಷಲ್ ಬ್ರಾಂಚ್ ಸಿಐಡಿ ಕಚೇರಿ ಬೆಂಗಳೂರಲ್ಲಿ ಸೂಪರಿಂಟೆಂಡೆಂಟ್. |
| ಬರಹಗಳು | : | ಬೀಚಿ ಗೀಚಿದ್ದು, ಬುಲೆಟ್ಟು ಬಾಂಬ್ಸು ಭಗವದ್ಗೀತೆ, ಕನ್ನಡ ಎಮ್ಮೆ, ಬೆಳ್ಳಿತಿಮ್ಮ ನೂರೆಂಟು ಹೇಳಿದ, ಅಮ್ಮಾವ್ರ ಕಾಲ್ಗುಣ, ಹೆಂಡತಿ ನಕ್ಕಾಗ, ಸಂಪನ್ನರಿದ್ದಾರೆ ಎಚ್ಚರಿಕೆ, ಅಂದನಾ ತಿಂಮ, ತಿಂಮನ ತಲೆ, ಉತ್ತರ ಭೂಪ, ತಿಂಮಾಯಣ, ನನ್ನ ಬಯಾಗ್ರಫಿ (ಆತ್ಮ ಚರಿತ್ರೆ), ಟೆಂಟ್ ಸಿನಿಮಾ, ಬೆಂಗಳೂರು ಬಸ್ಸು ಮೊದಲಾದವು. |

### ಅ.ರಾ. ಮಿತ್ರ

| | | |
|---|---|---|
| ಪೂರ್ತಿ ಹೆಸರು | : | ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ |
| ಜನನ | : | 1935 ಫೆಬ್ರವರಿ 25 |
| ವೃತ್ತಿ | : | ಕನ್ನಡ ಉಪನ್ಯಾಸಕ |
| ಕೃತಿಗಳು | : | ಛಂದೋಮಿತ್ರ (ಶಾಸ್ತ್ರ ಸಾಹಿತ್ಯ), ಬಾಲ್ಕನಿಯ ಬಂಧುಗಳು, ಯಾರೊ ಬಂದಿದ್ದರು, ಸಂಕಲ್ಪಗಳು, ನಾನೇಕೆ ಕೊರೆಯುತ್ತೇನೆ, ಆರತಕ್ಷತೆ (ಪ್ರಬಂಧ ಸಂಕಲನ), ಲಲಿತ ಪ್ರಬಂಧಗಳು (ಸಂಪಾದನೆ) ಇತ್ಯಾದಿ. |

## ಬಿ.ಜಿ.ಎಲ್. ಸ್ವಾಮಿ

| | | |
|---|---|---|
| ಪೂರ್ಣನಾಮ | : | ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ<br>ಕನ್ನಡದ ಪ್ರಸಿದ್ಧ ಸಾಹಿತಿ ಡಿ.ವಿ.ಗುಂಡಪ್ಪನವರ ಏಕಮಾತ್ರ ಪುತ್ರ. |
| ವೃತ್ತಿ | : | ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ. |
| ಕೃತಿಗಳು | : | ಸಾಕ್ಷಾತ್ಕಾರದ ಹಾದಿಯಲ್ಲಿ, ಸಸ್ಯ ಪುರಾಣ, ಕಾಲೇಜುರಂಗ, ಕಾಲೇಜು ತರಂಗ, ಹಸುರು ಹೊನ್ನು, ಅಮೇರಿಕಾದಲ್ಲಿ ನಾನು, ದೌರ್ಗಂಧಿಕಾಪಹರಣ, ಮೈಸೂರು ಡೈರಿ, ಪ್ರಾಧ್ಯಾಪಕನ ಪೀಠದಲ್ಲಿ. |

## ಟಿ. ಸುನಂದಮ್ಮ

| | | |
|---|---|---|
| ಜನನ | : | 1917 ಆಗಸ್ಟ್ 8. ತಂದೆ ರಾಮಯ್ಯ, ತಾಯಿ ನಾಗಮ್ಮ |
| ನಗೆಬರಹದ ಸಂಕಲನಗಳು | : | ಆದರ್ಶದ ಆಡಂಬರ, ಕೂಸು ಹುಟ್ಟುವುದಕ್ಕೆ ಮುಂಚೆ, ಗೃಹಲಕ್ಷ್ಮಿ, ಬಾದರಾಯಣ, ಚಿಕ್ಕಪ್ಪನ ಉಯಿಲು, ಚಕ್ರಚುಕ್ಕೆ, ಸದಾಶಿವನ ಸ್ವಯಂವಧು. |
| ಪ್ರಶಸ್ತಿ, ಗೌರವಗಳು | : | 1979ರಲ್ಲಿ 'ಸುನಂದಾಭಿನಂದನ' ಗೌರವ ಗ್ರಂಥ ಅರ್ಪಣೆ<br>1981ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ<br>ಕರ್ನಾಟಕ ಲೇಖಕಿಯರ ಸಂಘದ ಪ್ರಥಮ ಅಧ್ಯಕ್ಷೆ. |

## ಹೆಚ್. ಡುಂಡಿರಾಜ್

ಕನ್ನಡದ ಪ್ರಮುಖ ಹಾಸ್ಯಸಾಹಿತಿ, ನಗೆ ಹನಿಗಳ ರಚನೆಯಿಂದ ಪ್ರಸಿದ್ಧರಾದವರು.

| | | |
|---|---|---|
| ವೃತ್ತಿ | : | ಕಾರ್ಪೊರೇಷನ್ ಬ್ಯಾಂಕ್ ಅಧಿಕಾರಿ |
| ಕೃತಿಗಳು | : | ನಮ್ಮ ಗೋಡೆಯ ಹಾಡು, ನೀನಿಲ್ಲದೆ, ನನ್ನ ಕವಿತೆ, ನನ್ನ ಹಾಗೆ, ಆಯದ ಕವನಗಳು, ಏನಾಯಿತು (ಕವನ ಸಂಕನಲಗಳು).<br>ಪಾಡ್ಯ ಬಿದಿಗೆ ತದಿಗೆ, ನೂರು ಹನಿಗವನಗಳು, ಇನ್ನೂರು ಇನಿಗವನಗಳು, ಪಂಚ್-ಕ-ಜಾಯ್, ಹನಿಕೇತನ, ಮಾತು ಕ(ವಿ)ತೆ, (ಹನಿಗವನ ಸಂಕಲನಗಳು).<br>ಯಾರಿಗೂ ಹೇಳ್ಬೇಡಿ (ನಗೆ ಲೇಖನಗಳು). |
| ಪ್ರಶಸ್ತಿ | : | ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಮುದ್ದಣ ಕಾವ್ಯ ರಾಜ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಚುಟುಕು ರತ್ನ ಪ್ರಶಸ್ತಿ. |

## ವೈಚಾರಿಕ ಪ್ರಬಂಧ ಮತ್ತು ನಗೆ ಲೇಖನ

### ವೈಚಾರಿಕ ಪ್ರಬಂಧ

ಒಂದು ವಿಷಯದ ಕುರಿತು ಚಿಂತನೆಯನ್ನೊಳಗೊಂಡ ವ್ಯವಸ್ಥಿತವಾದ ತಾರ್ಕಿಕವಾದ ಬರವಣಿಗೆಯೇ ವೈಚಾರಿಕ ಪ್ರಬಂಧ. ಚಿಂತನೆ, ತರ್ಕ, ವಿವೇಚನೆಯು ಇಲ್ಲಿ ಮುಖ್ಯವಾಗುತ್ತದೆ. ಲಲಿತ ಪ್ರಬಂಧಕ್ಕಿಂತ ಭಿನ್ನವಾದ ಸ್ವರೂಪ ಇಲ್ಲಿರುತ್ತದೆ. ರಾಜಕೀಯ, ಧಾರ್ಮಿಕ ವಿಚಾರ, ವಿಜ್ಞಾನ, ಸಂಸ್ಕೃತಿ, ನಾಗರಿಕತೆ ಮೊದಲಾಗಿ ಯಾವುದೇ ವಿಷಯಗಳನ್ನು ಎತ್ತಿಕೊಂಡು ವೈಚಾರಿಕ ಪ್ರಬಂಧಗಳನ್ನು ಬರೆಯಬಹುದು. ವೈಚಾರಿಕ ಪ್ರಬಂಧಗಳನ್ನು ರಚಿಸುವವರಿಗೆ ಪ್ರತಿ ವಿಷಯದ ಕುರಿತಾದ ಮಾಹಿತಿ ತಿಳಿದಿರಬೇಕು. ಅದರ ಕುರಿತಾಗಿ ಚಿಂತನೆಯನ್ನು ನಡೆಸುವ ಸಾಮರ್ಥ್ಯವಿರಬೇಕು. ವಿಷಯದ ಹಿಂದು–ಮುಂದುಗಳನ್ನು ಕುರಿತು ಆಲೋಚಿಸಿ ನಿಖರವಾದ ಮಾತುಗಳಲ್ಲಿ ಸುಸಂಬದ್ಧವಾಗಿ ಪ್ರತಿಪಾದಿಸುವ ಕೌಶಲ್ಯವಿರಬೇಕು. ಹಾಗೆ ರಚನೆಯಾದ ವೈಚಾರಿಕ ಪ್ರಬಂಧವು ಒಂದು ವಿಷಯದ ಕುರಿತಾಗಿ ನಮ್ಮ ಅರಿವನ್ನು ಹೆಚ್ಚಿಸುತ್ತದೆ.

### ನಗೆ ಲೇಖನ/ಲಲಿತ ಪ್ರಬಂಧ

ಯಾವುದೇ ವಿಷಯವನ್ನೆತ್ತಿಕೊಂಡು ಲಘುದಾಟಿಯಲ್ಲಿ ಸರಸವಾಗಿ ನಿರೂಪಿಸುತ್ತ ಸಾಗುವುದು ನಗೆಲೇಖನ/ಲಲಿತ ಪ್ರಬಂಧದ ವೈಶಿಷ್ಟ್ಯ. ಇಲ್ಲಿ ಗಾಂಭೀರ್ಯಕ್ಕೆ ಎಡೆ ಇಲ್ಲ. ವಿಷಯವು ನಿಮಿತ್ತ ಮಾತ್ರವಾಗಿರುತ್ತದೆ. ನಿರೂಪಣೆಯ ಬಗೆಯಿಂದ ಅದು ಓದುಗರಲ್ಲಿ ನಗೆಯನ್ನು ಉಕ್ಕಿಸುತ್ತದೆ. ಸತ್ಯ ಸಂಗತಿಗಳನ್ನು ಮತ್ತು ಘಟನೆಗಳನ್ನು ಹಾಸ್ಯ ದೃಷ್ಟಿಯಿಂದ ಇಲ್ಲಿ ನೋಡಲಾಗುತ್ತದೆ. ಹಾಸ್ಯದೊಂದಿಗೆ ವ್ಯಂಗ್ಯವೂ ಇಲ್ಲಿ ಬರಬಹುದು. ಒಟ್ಟಿನಲ್ಲಿ ಜೀವನದ ವಿವಿಧ ಸಂಗತಿಗಳನ್ನು, ಸುತ್ತಮುತ್ತ ನಡೆಯುವ ಘಟನೆಗಳನ್ನು ಸರಸ ದೃಷ್ಟಿಕೋನದಿಂದ ನೋಡಿ ಬರೆದ ಬರಹಗಳನ್ನು ನಗೆಲೇಖನ ಅಥವಾ ಲಲಿತ ಪ್ರಬಂಧ ಎನ್ನಬಹುದು. ಲಲಿತಪ್ರಬಂಧ/ನಗೆ ಬರಹಗಳು ಹಾಸ್ಯದ ಮೂಲಕವೇ ನಮ್ಮ ಜೀವಾನುಭವವನ್ನು ವಿಸ್ತರಿಸುತ್ತವೆ. ಜೀವನದ ಅನೇಕ ಸಂಗತಿಗಳನ್ನು ವ್ಯಂಗ್ಯ, ವಿನೋದದಿಂದ ನೋಡಲು ಅವು ಕಲಿಸುತ್ತವೆ. ಕನ್ನಡದಲ್ಲಿ ನಾಡಿಗೇರ ಕೃಷ್ಣರಾಯ, ನಾ.ಕಸ್ತೂರಿ, ಬೀಚಿ, ಬಿ.ಜಿ.ಎಲ್. ಸ್ವಾಮಿ, ಭುವನೇಶ್ವರಿ ಹೆಗಡೆ, ಟಿ. ಸುನಂದಮ್ಮ, ಡುಂಡಿರಾಜ್, ಅ.ರಾ. ಮಿತ್ರ, ಟಿ.ಎಸ್. ಅಂಬುಜಾ ಕು.ಗೋ., ಪಿ.ಎನ್. ಮೂಡಿತ್ತಾಯ ಮೊದಲಾದವರು ಹಾಸ್ಯ ಬರಹಗಳನ್ನು ಬರೆದು ಪ್ರಸಿದ್ಧರಾಗಿದ್ದಾರೆ.

**ತಿದ್ದುಪಡಿ :** ಪಾಠ ಪುಸ್ತಕದ ಪುಟ ಸಂಖ್ಯೆ 59ರ ಚಟುವಟಿಕೆಯ ತಿದ್ದುಪಡಿ. 'ಮೇಲಿನ ಮಾದರಿಯಂತೆ ಈ ಕೆಳಗಿನ ಪದಗಳನ್ನು ಮತ್ತು ಅವುಗಳ ವಿಶೇಷಣ ರೂಪಗಳನ್ನು (ಭಾವನಾಮ ಎಂದು ತಪ್ಪಾಗಿ ಮುದ್ರಣಗೊಂಡಿದೆ) ಬಳಸಿಕೊಂಡು ವಾಕ್ಯರಚನೆ ಮಾಡಿರಿ' ಎಂದಾಗಬೇಕು.

## ನಾಮ ಮತ್ತು ವಿಶೇಷಣ ರೂಪಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸುವುದು

ವಿದ್ಯಾರ್ಥಿಗಳನ್ನು ಚಿಕ್ಕ ಗುಂಪುಗಳನ್ನಾಗಿ ಮಾಡಿ ಪತ್ರದ ಮೊದಲಿನ ಪಾಠಭಾಗಗಳನ್ನು ಸೇರಿಸಿಕೊಂಡು ಅಲ್ಲಿ ಬಂದಿರುವ ನಾಮ ಮತ್ತು ನಾಮ ವಿಶೇಷಣಗಳನ್ನು ಗುರುತಿಸಿ ಪಟ್ಟಿ ಮಾಡಲು ಸೂಚಿಸುವುದು. ಅತಿ ಹೆಚ್ಚು ಪದಗಳನ್ನು ಸಂಗ್ರಹಿಸಿದ ಗುಂಪನ್ನು ಪ್ರೋತ್ಸಾಹಿಸುವುದು. ಇಲ್ಲಿ ಒಂದು ಗುಂಪಿನವರು ನಾಮ ಪದವನ್ನು ಹೇಳಲಿ. ಇನ್ನೊಂದು ಗುಂಪಿನವರು ಅದಕ್ಕಿರುವ ವಿಶೇಷಣ ರೂಪವನ್ನು ಹೇಳಲಿ.

ಉದಾ: ವಿಚಾರ – ವೈಚಾರಿಕ

ಇತಿಹಾಸ – ಐತಿಹಾಸಿಕ

ಬಳಿಕ ನಾಮ ಮತ್ತು ವಿಶೇಷಣ ರೂಪಗಳನ್ನು ವಾಕ್ಯಗಳಲ್ಲಿ ಪ್ರಯೋಗಿಸುವಂತೆ ವಿದ್ಯಾರ್ಥಿಗಳ ಗುಂಪುಗಳಿಗೆ ಸೂಚಿಸುವುದು. ಪ್ರತಿ ಗುಂಪುಗಳು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು. ನಾಮಪದ, ವಿಶೇಷಣ ಹಾಗೂ ವಾಕ್ಯಗಳನ್ನು ರಚನಾ ಪುಸ್ತಕದಲ್ಲಿ ಸೇರಿಸಿಕೊಳ್ಳುವಂತೆ ಸೂಚಿಸುವುದು.

ಅಭ್ಯಾಸಕ್ಕಾಗಿ ಮಾದರಿ :

ವಿಜ್ಞಾನ –

ಶಿಕ್ಷಣ –

ವಿದ್ಯಾರ್ಥಿಗಳು ಅಧ್ಯಯನ ಮಾಡುವ ವಿಷಯಗಳಲ್ಲಿ ವಿಜ್ಞಾನವೂ ಒಂದಾಗಿದೆ.

ವಿದ್ಯಾರ್ಥಿಗಳು ವೈಜ್ಞಾನಿಕ ವಿಷಯಗಳನ್ನು ಅಧ್ಯಯನ ಮಾಡುತ್ತಾರೆ.

ಮಕ್ಕಳು ತರಗತಿ ಕೋಣೆಗಳಲ್ಲಿ ಮಾತ್ರವಲ್ಲ ಶಾಲಾ ಕಾಲೇಜುಗಳ ಹೊರಗೆಯೂ ಶಿಕ್ಷಣವನ್ನು ಪಡೆಯುತ್ತಾರೆ.

ಶಾಲಾ ಕಾಲೇಜುಗಳಲ್ಲಿ ಜರಗುವ ಶೈಕ್ಷಣಿಕ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

### ನುಡಿಗಟ್ಟುಗಳು

ತಲೆಕೆಡಿಸು – ಬುದ್ಧಿ ಹಾಳು ಮಾಡು

ತಲೆ ತಗ್ಗಿಸು – ನಾಚಿಕೊಳ್ಳು, ಅಪಮಾನ ಹೊಂದು

ತಲೆದೂಗು – ಮೆಚ್ಚು, ಒಪ್ಪಿಕೊಳ್ಳುವುದು, ಸಮ್ಮತಿಸು

'ತಲೆ' ಎನ್ನುವ ಪದದ ಜೊತೆ ಸೇರಿದ ಕ್ರಿಯಾಪದಗಳು ಉಂಟು ಮಾಡಿದ ಅರ್ಥ ವ್ಯತ್ಯಾಸಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. ಇಂತಹ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಪ್ರಯೋಗಿಸುವಂತೆ ಸೂಚಿಸುವುದು.

ಉದಾ : ತಲೆಗಂಟು – ದೃಢವಾಗಿ ನಿಲ್ಲು

ತಾನು ಓರ್ವ ಉತ್ತಮ ಬಿಲ್ಲುಗಾರನಾಗಬೇಕೆಂಬ ಆಸೆ ಏಕಲವ್ಯನ ತಲೆಗಂಟಿತು.

ಹೀಗೆ ವಿವಿಧ ಅರ್ಥಗಳನ್ನು ನೀಡುವ ನುಡಿಗಟ್ಟುಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಲಿ. ಅವುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ ತರಗತಿಯಲ್ಲಿ ಮಂಡಿಸಲಿ.

## ಮಂಕುತಿಮ್ಮನ ಕಗ್ಗ

– ಡಿ.ವಿ.ಜಿ.

ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವು ಹೊಸಗನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಗಳಿಸಿದೆ. ಆಳವಾದ ಚಿಂತನಶೀಲತೆ, ವಿಶಾಲವಾದ ಜೀವನಾನುಭವ ಆಧ್ಯಾತ್ಮಿಕತೆ ಮೊದಲಾದುವುಗಳು ಈ ಕೃತಿಯಲ್ಲಿ ಕಂಡುಬರುತ್ತವೆ. 'ಮುಕ್ತಕ' ಎಂಬ ವರ್ಗಕ್ಕೆ ಸೇರುವ ಈ ರಚನೆಗಳಲ್ಲಿ ನಿರ್ದಿಷ್ಟವಾದ ಕತೆಯಿಲ್ಲ. ಪ್ರತಿಯೊಂದು ಮುಕ್ತಕವೂ ಸ್ವಯಂಪೂರ್ಣವಾಗಿದೆ. ಇವುಗಳಲ್ಲಿ ನಿಯತವಾಗಿ ಆದಿಪ್ರಾಸವು ಕಂಡುಬರುವುದು. ಮಂಕುತಿಮ್ಮನ ಕಗ್ಗವನ್ನು ಲಯಬದ್ಧವಾಗಿಯೂ ಭಾವಪೂರ್ಣವಾಗಿಯೂ ಹಾಡಲು ಸಾಧ್ಯವಾಗುತ್ತದೆ. ಲೋಕಾನುಭವದಿಂದ ಕೂಡಿದ, ತತ್ವಮಂಥನದಿಂದ ಹೊರಹೊಮ್ಮುವ ಮಾತುಗಳು ಪದ್ಯ ರೂಪವನ್ನು ಪಡೆದು ಕನ್ನಡದ ಜನಮಾನಸಕ್ಕೆ ಹತ್ತಿರವಾಗಿವೆ. ಗಾದೆ ಮಾತುಗಳಂತೆ ಅನುಭವಾಮೃತವಾಗಿ ಜನಜೀವನದ ಒಳಿತನ್ನು ಸೂಚಿಸುತ್ತವೆ. 'ಕನ್ನಡದ ಭಗವದ್ಗೀತೆ' ಎಂದೂ ಮಂಕುತಿಮ್ಮನ ಕಗ್ಗವು ಕರೆಯಲ್ಪಟ್ಟಿದೆ.

'ಮಂಕುತಿಮ್ಮನ ಕಗ್ಗ'ವನ್ನು ರಚಿಸಲು ಒದಗಿಬಂದ ಹಿನ್ನೆಲೆಯನ್ನು ಡಿ.ವಿ.ಜಿ. ಯವರು ಹೀಗೆ ಹೇಳುತ್ತಾರೆ.

ಸಾಧು ಸ್ವಭಾವದವನೂ ದೈವಭಕ್ತನೂ ಆದ ತಿಮ್ಮಗುರು ಹಳ್ಳಿ ಮಕ್ಕಳಿಗೆಲ್ಲ ಗುರುವಾಗಿದ್ದವನು. ಅವನ ತಂಗಿಯ ಮಗ ಸೋಮು. ಆತ ತಿಮ್ಮಗುರುವಿನ ಪ್ರಾಣದಂತಿದ್ದ. ಸೋಮು ಉನ್ನತ ಶಿಕ್ಷಣಕ್ಕಾಗಿ ಮೈಲಾರಕ್ಕೆ ತೆರಳಿದ. ತಿಮ್ಮ ಒಮ್ಮೆ ಅಳಿಯನಿದ್ದಲ್ಲಿಗೆ ಹೋದಾಗ ಸೋಮುವಿನ ನಡತೆಯಲ್ಲಿ ಸ್ವಲ್ಪ ವ್ಯತ್ಯಾಸವುಂಟಾಗಿರುವುದನ್ನು ಗಮನಿಸಿದ. ಆದರೂ ಅವರಿಬ್ಬರ ಆತ್ಮೀಯತೆಗೇನೂ ಧಕ್ಕೆಯಾಗಲಿಲ್ಲ. ಎರಡು ತಿಂಗಳ ಬಳಿಕ ತಿಮ್ಮನಿಂದ ಸೋಮುವಿನ ತಂದೆಗೊಂದು ಪತ್ರ ಬಂತು. ಅದರಲ್ಲಿ ಹೀಗೆ ಬರೆದಿತ್ತು. "ನಾನು ತಿರುಪತಿಯಲ್ಲಿದ್ದೇನೆ, ಮುಂದೆ ಕಾಶಿಗೆ ಹೋಗುವ ಮನಸ್ಸು. ಕೆಲಸಕ್ಕೆ ವಿದಾಯ ಹೇಳಿದ್ದೇನೆ. ಸೋಮು ಬೆಳೆದು ಯೋಗ್ಯನಾಗಿದ್ದಾನೆ. ನನಗೆ ಬೇರೇನೂ ಆಸೆಯಿಲ್ಲ. ನನ್ನ ಹಳೆಯ ಮನೆಯಲ್ಲಿ ನಾನು ಏನೇನೋ ಬರೆದ ಕಡತವೊಂದಿದೆ. ಬೇಕಾದರೆ ಸೋಮು ಅದನ್ನು ತೆಗೆದುಕೊಳ್ಳಲಿ. ನನ್ನನ್ನು ಎಲ್ಲರೂ ಮರೆಯಿರಿ." ಸೋಮು ಆ ಕಡತವನ್ನು ನೋಡಿದ.

ಕಡತದಲ್ಲಿ ಬರೆದಿಟ್ಟ ಮುಖ್ಯ ವಿಚಾರಗಳನ್ನು ಗುರುತಿಸಿಕೊಂಡ. ಅದೇ 'ಮಂಕು ತಿಮ್ಮನ ಕಗ್ಗ'.

ಮಂಕುತಿಮ್ಮನ ಕಗ್ಗ ಮತ್ತು ಮರುಳ ಮುನಿಯನ ಕಗ್ಗದ ಪರಿಚಯವು ವಿದ್ಯಾರ್ಥಿಗಳಿಗೆ ಈ ಮೊದಲೇ ಲಭಿಸಿರುತ್ತದೆ. ಹಿಂದಿನ ತರಗತಿಗಳಲ್ಲಿ ಕಗ್ಗದ ಕೆಲವು ಪದ್ಯಗಳನ್ನು ಅವರು ಕಲಿತಿರುತ್ತಾರೆ. ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಅರಿಯುವ ಉದ್ದೇಶದಿಂದ, ಅವರಲ್ಲಿ ಕೆಲವು ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು.

- ಸರ್ವಜ್ಞನ ತ್ರಿಪದಿಗಳು, ಶರಣರ ವಚನಗಳಿಗಿಂತ ಮಂಕುತಿಮ್ಮನ ಕಗ್ಗವು ಹೇಗೆ ಭಿನ್ನವಾಗಿದೆ?
- ಕಗ್ಗದಲ್ಲಿ ಪ್ರತಿಪಾದಿತವಾಗುವ ಮುಖ್ಯ ಆಶಯಗಳಾವುವು?
- ಕಗ್ಗ ರಚನೆಯ ಹಿಂದೆ ಡಿವಿಜಿಯವರಿಗೆ ಪ್ರೇರಣೆಯಾಗಿರುವ ಕಥೆಯು ತಿಳಿದಿದೆಯೇ?

ಈ ರೀತಿಯಾಗಿ ಮುಂದುವರಿಯುವುದು. ವಿದ್ಯಾರ್ಥಿಗಳು ಹೇಳಿದ ವಿಚಾರಗಳನ್ನು ಕ್ರೋಡೀಕರಿಸಿ ನಿಗಮನಕ್ಕೆ ಬರುವುದು.

**ಮುಕ್ತಕ :** ವಿಶಾಲವಾದ ಮತ್ತು ಆಳವಾದ ಜೀವನಾನುಭವಗಳನ್ನು ಮನಮುಟ್ಟುವಂತೆ ಬಿಡಿಬಿಡಿಯಾಗಿ ಪದ್ಯ ರೂಪದಲ್ಲಿ ಹೇಳುವ ರಚನೆಗಳನ್ನು 'ಮುಕ್ತಕ' ಎನ್ನುತ್ತಾರೆ. ಅವುಗಳಲ್ಲಿ ಹಾಸ್ಯ/ವಿಡಂಬನೆಗಳು ಬರುತ್ತವೆ. ಚುಟುಕಗಳು, ಶತಕಗಳು, ಅಷ್ಟಕಗಳು, ವಚನಗಳು, ಸರ್ವಜ್ಞನ ತ್ರಿಪದಿಗಳೂ ಮುಕ್ತಕಗಳ ಸಾಲಲ್ಲಿ ನಿಲ್ಲುತ್ತವೆ.

### ಪ್ರವೇಶ ಚಟುವಟಿಕೆ

ಹಿಂದಿನ ತರಗತಿಯಲ್ಲಿ ಕಲಿತ ಯಾವುದಾದರೂ ಮುಕ್ತಕವೊಂದನ್ನು ಹಾಡಲು ವಿದ್ಯಾರ್ಥಿಗಳಲ್ಲಿ ಹೇಳುವುದು. ಅದರ ಆಶಯವನ್ನೂ ಹೇಳಿಸುವುದು. ಬಳಿಕ ಪಠ್ಯಭಾಗದ (ಕಗ್ಗದ) ಪದ್ಯಗಳ ಓದು ಮತ್ತು ಸಾರಾಂಶ ತಿಳಿಯುವ ಚಟುವಟಿಕೆಯು ನಡೆಯಲಿ. ಪಾಠಭಾಗದಲ್ಲಿ ಬಂದ ಆರು ಕಗ್ಗಗಳನ್ನು ಆರು ಗುಂಪುಗಳಿಗೆ ಹಂಚುವುದು. ಒಂದೊಂದು ಪದ್ಯವನ್ನು ಒಬ್ಬೊಬ್ಬ ವಿದ್ಯಾರ್ಥಿಯಿಂದ ಬಾಯ್ದೆರೆಯಾಗಿ, ಭಾವಪೂರ್ಣವಾಗಿ ಓದಿಸುವುದು. ಅರ್ಥ ಸ್ಪಷ್ಟತೆಗಾಗಿ ಪದಗಳನ್ನು ವಿಂಗಡಿಸಬೇಕಾದಲ್ಲಿ ವಿದ್ಯಾರ್ಥಿಗಳಿಂದ ವಿಂಗಡಿಸಿ ಹೇಳಿಸುವುದು. ಉಚ್ಚಾರದೋಷವನ್ನು ಕಂಡಲ್ಲಿ ಅಧ್ಯಾಪಕರು ಸರಿಪಡಿಸುವುದು.

### ಪದ ವಿಂಗಡನೆ

ಕಡಲೊಳು +ಎತ್ತಲೋ–ಕಡಲೊಳೆತ್ತಲೋ

ಸಮೃದ್ಧಿಗೆ + ಓಸುಗ – ಸಮೃದ್ಧಿಗೋಸುಗ

ದಾರಿಯ+ಆತ್ಮೋನ್ನತಿ – ದಾರಿಯಾತ್ಮೋನ್ನತಿ

ಕಳೆಯುತ+ಒಂದು+ಇರಲಲ್ಲಿ – ಕಳೆಯುತೊಂದಿರಲಲ್ಲಿ

ಬೆಳೆಯುವುದು+ಇನ್ನೊಂದು+ಎಲ್ಲೋ – ಬೆಳೆವುದಿನ್ನೊಂದೆಲ್ಲೋ

ಸಿಹಿ+ಅಷ್ಟು+ಇಷ್ಟು – ಸಿಹಿಯಷ್ಟಿಷ್ಟು

**ವೀಡಿಯೋ ವೀಕ್ಷಣೆ**

ಮಂಕುತಿಮ್ಮನ ಕಗ್ಗದ ಹಾಡುವಿಕೆ ಹಾಗೂ ವ್ಯಾಖ್ಯಾನವಿರುವ ವೀಡಿಯೋಗಳು ಇಂಟರ್‌ನೆಟ್‌ನಲ್ಲಿ ಲಭ್ಯವಿವೆ. ಗೂಗಲ್ ವೆಬ್‌ಸೈಟ್ www.youtube.comಗೆ ಹೋಗಿ ಅಲ್ಲಿ ಮಂಕುತಿಮ್ಮನ ಕಗ್ಗ ಎಂದು ಕೀಲಿಮಣೆ ಒತ್ತಿ search (ಹುಡುಕಾಟ) ಕೊಟ್ಟರೆ ಮಂಕುತಿಮ್ಮನ ಕಗ್ಗದ ತಾತ್ಪರ್ಯ ಸಹಿತವಾದ ವೀಡಿಯೋ ಕಂಪ್ಯೂಟರ್ ಪರದೆಯ ಮೇಲೆ ಕಾಣಿಸಿಕೊಳ್ಳುತ್ತದೆ. ಅದನ್ನು ಡೌನ್‌ಲೋಡ್ ಮಾಡಿಕೊಂಡು ವೀಕ್ಷಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಅಧ್ಯಾಪಕರು ಡೌನ್‌ಲೋಡ್ ಮಾಡಿದ ವೀಡಿಯೋವನ್ನು ತರಗತಿಯಲ್ಲಿ ಪ್ರದರ್ಶಿಸುವುದು. ಇದರಿಂದ ವಿದ್ಯಾರ್ಥಿಗಳಿಗೆ ಮಂಕುತಿಮ್ಮನ ಕಗ್ಗವನ್ನು ಹಾಡುವ ಹಾಗೂ ವ್ಯಾಖ್ಯಾನಿಸುವ ವಿಧಾನವು ತಿಳಿಯುತ್ತದೆ.

**ಸಾರಾಂಶ/ಆಶಯ ಬರೆಯುವುದು**

ಪಾಠಭಾಗದಲ್ಲಿ ಬಂದ ಪ್ರತಿ ಪದ್ಯವನ್ನು ಒಂದೊಂದು ಗುಂಪಿಗೆ ಹಂಚುವುದು. ಪದ್ಯಗಳನ್ನು ಓದಿ ಗುಂಪಿನಲ್ಲಿ ಚರ್ಚಿಸುವಂತೆ ಸೂಚಿಸುವುದು. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯವನ್ನು ನೀಡುವುದು. ಗುಂಪಿನಲ್ಲಿ ಕ್ರೋಡೀಕರಿಸಿದ ಆಶಯಗಳನ್ನು ಮಂಡಿಸುವಂತೆ ಸೂಚಿಸುವುದು. ಅಗತ್ಯ ಬದಲಾವಣೆಗಳೊಂದಿಗೆ ಸಾರಾಂಶವನ್ನು ಉತ್ತಮ ಪಡಿಸುವುದು. ಪರಿಷ್ಕರಿಸಿ ಎಲ್ಲರೂ Log bookನಲ್ಲಿ ಬರೆದುಕೊಳ್ಳಲಿ. ಅಧ್ಯಾಪಕರು Portfolioದಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ದಾಖಲಿಸುವುದು.

ಪ್ರಪಂಚದ ಬೆಳವಣಿಗೆ ವಿಸ್ಮಯಕಾರಿಯಾದದ್ದು. ಭೂಮಿಯಲ್ಲಿ ಹುಳು ಹುಪ್ಪಟೆಗಳು ಹುಟ್ಟಿ ಸತ್ತು ಹೋಗುತ್ತವೆ. ಗಟ್ಟಿ ನೆಲ ಸಮುದ್ರದ ಅಲೆಗಳಿಗೆ ಬಲಿಯಾಗಿ ಅಥವಾ ನದಿಯ ಪ್ರವಾಹಕ್ಕೆ ಬಲಿಯಾಗಿ, ಭೂಕಂಪಕ್ಕೆ ತುತ್ತಾಗಿ ಸವೆದು ಕರಗಿ ಹೋಗುತ್ತದೆ. ಅದೇ ಸಮಯದಲ್ಲಿ ಮಹಾಸಾಗರಗಳ ನಡುವೆ ಎಲ್ಲೋ ಒಂದು ಕಡೆ ಹೊಸದ್ವೀಪವೊಂದು ಮೇಲೇಳುತ್ತಿರುತ್ತದೆ. ಒಂದು ಕಡೆ ನಾಶ, ಇನ್ನೊಂದು ಕಡೆ ಹುಟ್ಟು. ಹೀಗೆ ಈ ವಿಶ್ವಕ್ಕೆ ಎಂದಿಗೂ ನಾಶವೆಂಬುದಿಲ್ಲ. ಹೇಗೆ ಇದಕ್ಕೆ ಆದಿ ಎಂಬುದಿಲ್ಲವೋ ಹಾಗೆಯೇ ಇದಕ್ಕೆ ಅಂತ್ಯವೂ ಇಲ್ಲ.

ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಮನುಷ್ಯನಿಗೆ ಪ್ರಯತ್ನ ಎಂಬುದು ಅಗತ್ಯ. ಪ್ರಯತ್ನವಿಲ್ಲದೆ ಆತನಿಗೆ ಯಶಸ್ಸು ಸಾಧ್ಯವಾಗದು. ಜೀವನವನ್ನು ಗೌರವಿಸದೆ, ನಮ್ಮೊಳಗಿನ ಚೈತನ್ಯದ ಮೇಲೆ ನಂಬಿಕೆಯಿಡದೆ ಏನನ್ನಾದರೂ ಸಾಧಿಸುವುದು ಅಸಾಧ್ಯ. ಜೀವನ ಎಂಬುದು ಆತ್ಮೋನ್ನತಿಗೆ ಇರುವ ಸಾಧನ. ಆದ್ದರಿಂದ ಈ ಜಗತ್ತು ಬೇರೆ ಯಾರದೋ, ಇದರಲ್ಲಿ ನನಗೆ ಸಂಬಂಧವಿಲ್ಲ, ನಾನು ಬೇರೆ ಅದು ಬೇರೆ ಎಂದು

ಭೇದವೆಣಿಸಬಾರದು. ಈ ಸಾಧನೆಯ ಸಮಯದಲ್ಲಿ ಆತ್ಮೋನ್ನತಿ ಎಂಬ ಗುರಿಯ ಸಾಧನೆಯಲ್ಲಿ ವಿಘ್ನಗಳು ಬರಬಹುದು. ಸಿಹಿ ಕಹಿಗಳು ಮೇಳೈಸಬಹುದು. ದುಃಖ ದುಮ್ಮಾನಗಳು ಆವರಿಸಬಹುದು. ಆದರೆ ನಮ್ಮ ಜೀವನ ಸಮೃದ್ಧಿಗಾಗಿ, ಆ ಗುರಿಗಳನ್ನು ತಲುಪುವುದಕ್ಕಾಗಿ ಹೋರಾಡಬೇಕಾಗುತ್ತದೆ. ಆ ಹೋರಾಟವೇ ಆತ್ಮೋನ್ನತಿಗೆ ದಾರಿಯಾಗುತ್ತದೆ. ಅದರಿಂದಲೇ ಜೀವನ ಸುಖಮಯವಾಗುತ್ತದೆ. ಲೋಕ ಜೀವನವನ್ನು ಯಾವ ದೃಷ್ಟಿಯಿಂದ ನೋಡಬೇಕು ಎಂಬುದನ್ನು ಈ ಪದ್ಯ ಚಿತ್ರಿಸುತ್ತದೆ.

ಒಂದು ಭೋಜನವೆಂದರೆ ಅದು ಅನೇಕ ರುಚಿಗಳ ಸಮ್ಮೇಳನ. ಒಂದೇ ಬಗೆಯಿದ್ದರೆ ರುಚಿಯಿರುವುದಿಲ್ಲ. ಅದು ಭೋಜನವೆನಿಸಲಾರದು. ಒಂದಿಷ್ಟು ಉಪ್ಪು, ಒಂದಿಷ್ಟು ಹುಳಿ, ಒಂದಿಷ್ಟು ಖಾರ, ಒಂದಿಷ್ಟು ಸಿಹಿ ಇವೆಲ್ಲಾ ಭೋಜನದ ವಸ್ತುವಿನಲ್ಲಿ ಸೇರಿದಾಗ ಅದು ತಿನ್ನಲು ಅರ್ಹವಾಗುತ್ತದೆ. ಅದು ರುಚಿಕರವಾಗಿರುತ್ತದೆ. ಮತ್ತೂ ಬೇಕೆನಿಸುತ್ತದೆ. ಅದು ಆರೋಗ್ಯಕ್ಕೂ ದೇಹ ಪೋಷಣೆಗೂ ಒಳ್ಳೆಯದಾಗಿರುತ್ತದೆ. ಜೀವಿತದ ರೀತಿಯೂ ಹೀಗೆಯೆ. ತಪ್ಪು, ಸರಿ, ಬೆಪ್ಪು, ಜಾಣು, ಅಂದ, ಕುಂದು– ಹೀಗೆ ಅನೇಕ ವಿಧವಾದ ಗುಣಗಳು, ನಡವಳಿಕೆಗಳು ಸೇರಿದಾಗ ಅದು ಜೀವನ ಎನಿಸುತ್ತದೆ. ಇವೆಲ್ಲವೂ ಸೇರಿರುವುದರಿಂದಲೇ ಜೀವನ ಸ್ವಾರಸ್ಯಪೂರ್ಣವಾಗಿರುತ್ತದೆ. ಈ ವಿವಿಧತೆ ಇಲ್ಲದಿದ್ದರೆ ಜೀವನ ಒರಟಾಗಿ ಕಂಡೀತು.

ಹಳೆಯ ಬೇರಿನಿಂದ ಹೊಸಚಿಗುರು ಬರುವುದನ್ನು ನಾವು ಅರಿತಿದ್ದೇವೆ. ಚಿಗುರೊಡೆದು ಗಿಡವಾಗಿ, ಮರವಾಗಿ ವಿಸ್ತಾರಗೊಳ್ಳುತ್ತಾ ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಹಾಗೆಯೇ ನಮ್ಮಲ್ಲಿ ಬುದ್ಧಿಶಕ್ತಿ ಬೆಳೆದು ಅದರ ಹರಹು ವಿಸ್ತಾರವಾಗುತ್ತದೆ. ಜನರು ತಿಳಿದುಕೊಳ್ಳಬೇಕಾದ ಸಂಗತಿಗಳೂ, ಹೊಸದಾಗಿ ವಿಮರ್ಶಿಸಬೇಕಾದ ಸೂಕ್ಷ್ಮಗಳೂ, ಹೊಸದಾಗಿ ಪರಿಹರಿಸಬೇಕಾದ ಸಮಸ್ಯೆಗಳೂ ದಿನೇ ದಿನೇ ಹೆಚ್ಚಾಗುತ್ತಿರುತ್ತವೆ. ಇದರ ಪರಿಹಾರಕ್ಕಾಗಿ ನಾವು ಚಿಂತಿಸಬೇಕು. ಪ್ರಾಚೀನ ದೃಷ್ಟಿಯನ್ನು ಆಧುನಿಕ ದೃಷ್ಟಿಯೊಡನೆ ಸಮನ್ವಯಗೊಳಿಸಿದರೆ ಹೊಸ ಚಿಂತನೆ ಹೊರಹೊಮ್ಮಿ ಸಮಸ್ಯೆಗೆ ಪರಿಹಾರ ಕಾಣಬಹುದು. ಋಷಿ ವಾಕ್ಯ ಹೇಳುವ ಹಳೆಯ ತತ್ವದೊಡನೆ ನಮ್ಮ ಹೊಸಯುಕ್ತಿಗಳು ಕಲ್ಪಿಸಿರುವ ವಿಜ್ಞಾನ, ಕಲೆ ಮುಂತಾದವುಗಳನ್ನು ಸಮನ್ವಯಗೊಳಿಸುವುದರೊಂದಿಗೆ ಪರಿಹಾರ ಕಂಡುಕೊಳ್ಳುವತ್ತ ಚಿಂತಿಸಬೇಕು. ಇದರಿಂದ ಜೀವನಕ್ಕೆ ಒಳ್ಳೆಯದಾಗುತ್ತದೆ. ಯಶಸ್ಸು ಬರುತ್ತದೆ.

ಅನುಭವ ಎಂಬ ಹಾಲನ್ನು ವಿಚಾರ ಎಂಬ ಮಂತು (ಕಡೆಗೋಲು) ಕಡೆದಾಗಲೇ ಅರಿವು ಎಂಬ ಬೆಣ್ಣೆ (ನವನೀತ) ಸಿಗುತ್ತದೆ. ಮನಸ್ಸಿನಲ್ಲಿ ಉಂಟಾಗುವ ಅನುಭವಗಳು ಹತ್ತು ಹಲವು. ಎಲ್ಲವೂ ಭಿನ್ನ–ಭಿನ್ನ. ಮೊಸರಿನಲ್ಲಿ ಬೆಣ್ಣೆ ಸಿಗಬೇಕಾದರೆ 'ಕಡೆಯುವಿಕೆ' (ಮಂಥನ) ನಡೆಯಲೇಬೇಕು. ಜ್ಞಾನವೆಂಬ ಬೆಣ್ಣೆ ಸಿಗಬೇಕಾದರೆ ಅನುಭವಗಳ ಮಂಥನವಾಗಬೇಕು. ಹೀಗೆ ಮನೋಬುದ್ಧಿಗಳ ಸಾಂಗತ್ಯದಿಂದ ಜ್ಞಾನ, ಲಾಭ, ಆನಂದ ಪ್ರಾಪ್ತಿಯಾಗುತ್ತವೆ.

ದೊಡ್ಡ ಬೆಟ್ಟದ ಕೆಳಗೆ ಬೆಳೆಯುವ ಹುಲ್ಲು ದೀನತೆಯನ್ನು ತೋರುತ್ತದೆ. ತಾನು ಮಾಡುವ ಕೆಲಸ, ತನ್ನ ಸ್ಥಿತಿ ಬೆಟ್ಟಕ್ಕೆ ಸಮಾನವಾದುದಲ್ಲ ಎಂಬ ಅರಿವು ಅದರ ಜೀವನದ ಯಶಸ್ಸಿಗೆ ದಾರಿಯಾಗುತ್ತದೆ.

ಆದುದರಿಂದ ತಾನು ಸಮಾಜಕ್ಕೆ ಎಷ್ಟು ಸೇವೆಗೈದಿದ್ದೇನೆ ಎಂಬ ಅರಿವು ಮನುಷ್ಯನಲ್ಲಿರಬೇಕು. ಮಲ್ಲಿಗೆಯ ಹೂವು ಮನೆಯ ಒಳಗೆ ಸುವಾಸನೆಯನ್ನು ಸೂಸುವಂತೆ ವ್ಯಕ್ತಿಯೊಬ್ಬನು ಮನೆಯವರೆಲ್ಲರಿಗೂ ಸಂತೋಷವನ್ನು ತಂದುಕೊಡಬೇಕು. ವಿಧಿಯ ಆಟದ ಮಧ್ಯೆ ಎಷ್ಟೇ ಕಷ್ಟ ಬಂದರೂ ಎದೆಗುಂದದವನಾಗಿ, ಕಲ್ಲು ಮಳೆಯ ರಭಸವನ್ನು ತಾಳಿಕೊಳ್ಳುವಂತೆ ಮನೋದಾರ್ಢ್ಯವನ್ನು ಬೆಳೆಸಿಕೊಳ್ಳಬೇಕು. ದೀನ ದುರ್ಬಲರಿಗೆ ಸಹಾಯವನ್ನೀಯಬೇಕು.

## ಲೇಖನ ತಯಾರಿಸುವುದು

ಮಂಕುತಿಮ್ಮನ ಕಗ್ಗದಲ್ಲಿ ಜೀವನ ಮೌಲ್ಯವನ್ನು ಪ್ರತಿಪಾದಿಸುವ ಅಂಶಗಳಿರುವುದು ವಿದ್ಯಾರ್ಥಿಗಳಿಗೆ ಈಗಾಗಲೇ ಸ್ಪಷ್ಟವಾಗಿರುತ್ತದೆ. ಈ ವಿಚಾರಗಳನ್ನು ಕ್ರೋಡೀಕರಿಸಿ ಇನ್ನೂ ಹೆಚ್ಚಿನ ಪದ್ಯಗಳನ್ನು ಮೂಲ ಕೃತಿಯಿಂದ ಆಯ್ದುಕೊಂಡು 'ಮಂಕುತಿಮ್ಮನ ಕಗ್ಗದಲ್ಲಿ ಜೀವನ ಮೌಲ್ಯ' ಎಂಬ ವಿಷಯದ ಕುರಿತು ಲೇಖನವೊಂದನ್ನು ವಿದ್ಯಾರ್ಥಿಗಳು ಸಿದ್ಧಪಡಿಸುವಂತೆ ಹೇಳುವುದು. ಅವರು ತಯಾರಿಸಿ ತರಗತಿಯಲ್ಲಿ ಮಂಡಿಸಲಿ. ಉತ್ತಮಪಡಿಸಲಿ. ವಿದ್ಯಾರ್ಥಿಗಳ ಸಹಾಯಕ್ಕಾಗಿ ಜೀವನ ಮೌಲ್ಯವನ್ನು ಪ್ರತಿಪಾದಿಸುವ ಈ ಕೆಳಗಿನ ಪದ್ಯಗಳನ್ನು ನೀಡಬಹುದು.

ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು
ಬಂದುದೀ ವೈಷಮ್ಯ?–ಮಂಕುತಿಮ್ಮ

ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ, ಋತವ ಬಿಡದಿರಲಿ
ಮಿತವಿರಲಿ ಮನಸಿನುದ್ವೇಗದಲಿ ಭೋಗದಲಿ
ಅತಿ ಬೇಡವೆಲ್ಲಿಯುಂ–ಮಂಕುತಿಮ್ಮ

ಮೊಳೆವ ಸಸಿಯೊಳು ನಾನು, ತೊಳಗುವಿನನೊಳು ನಾನು
ಬೆಳೆವ ಶಿಶುವೊಳು ನಾನು, ಕೆಳನೋಟ ನಾನು
ಕಳಕಳಿಸುವೆಲ್ಲಮುಂ ನಾನೆಂದು ಭಾವಿಸುತೆ
ಒಳಗೂಡು ವಿಶ್ವದಲಿ–ಮಂಕುತಿಮ್ಮ

ಹೊಟ್ಟೆಯೊಂದರ ರಗಳೆ ಸಾಲದೆಂದೇನೊ ವಿಧಿ
ಹೊಟ್ಟೆ ಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್
ಹೊಟ್ಟೆತುಂಬಿದ ತೋಳ ಮಲಗೀತು; ನೀಂ ಪೆರರ
ದಿಟ್ಟಿಸುತ ಕರುಬುವೆಯೊ–ಮಂಕುತಿಮ್ಮ

## ಲಘುಟಿಪ್ಪಣಿ ತಯಾರಿ

### ಗಿಣಿಯೋದು ಪುಸ್ತಕ ಜ್ಞಾನ; ಅನುಭವವೇ ಧರ್ಮದ ದೀಪ

ಅನುಭವವು ಮೊಸರಿನಂತೆ ವಿಚಾರಶಕ್ತಿಯು ಅದನ್ನು ಕಡೆಗೋಲಿನಿಂದ ಕಡೆದಾಗ ಆನಂದವನ್ನುಂಟು ಮಾಡುವ ಜ್ಞಾನವೆಂಬ ಬೆಣ್ಣೆ ಸಿಗುತ್ತದೆ. ಹೀಗಲ್ಲದೆ ಬರಿಯ ಪುಸ್ತಕದ ಓದು ಗಿಳಿಯೋದಿನಂತೆ ವ್ಯರ್ಥ. ಅವನವನ ಅಂತರಂಗದ ಅನುಭವವೇ ಅವನ ಪಾಲಿಗೆ ಧರ್ಮದ ಜ್ಯೋತಿ. ಅನುಭವವೆಂದರೆ ಯಾವ ವಸ್ತುವನ್ನು ನಾವು ದೃಷ್ಟಿಯಲ್ಲಿರಿಸಿಕೊಂಡಿದ್ದೇವೆಯೋ ಆ ವಸ್ತುವೇ ನಾವಾಗುವುದು. ಇಂತಹ ಅನುಭವವು ಪುಸ್ತಕಗಳ ಗಿಳಿಪಾಠದಿಂದ ದೊರೆಯದು.

ಅನುಭವ ಸಿದ್ಧಿಗೆ ಬುದ್ಧಿಯೊಂದೇ ಸಾಕಾಗದು. ಬುದ್ಧಿಯ ಜೊತೆಗೆ ಚಿಂತನೆಯೂ, ಲೋಕಾನುಭವವೂ ಸೇರಿಕೊಳ್ಳಬೇಕು. ಹೀಗೆ ಬುದ್ಧಿ–ಭಾವಗಳು ಒಂದಾದಾಗ ಜ್ಞಾನವೆಂಬ ಸುಖಾನುಭವ ಸಿದ್ಧಿಸೀತು.

ಅನುಭವ ಎಂಬ ಹಾಲನ್ನು ವಿಚಾರ ಎಂಬ ಮಂತು (ಕಡೆಗೋಲು) ಕಡೆದಾಗಲೇ ಅರಿವು ಎಂಬ ಬೆಣ್ಣೆ (ನವನೀತ) ಸಿಗುತ್ತದೆ. ಮನಸ್ಸಿನಲ್ಲಿ ಉಂಟಾಗುವ ಅನುಭವಗಳು ಹತ್ತು ಹಲವು. ಎಲ್ಲವೂ ಭಿನ್ನ ಭಿನ್ನ. ಮೊಸರಿನಲ್ಲಿ ಬೆಣ್ಣೆ ಸಿಗಬೇಕಾದರೆ ‘ಕಡೆಯುವಿಕೆ’ (ಮಂಥನ) ನಡೆಯಲೇಬೇಕು. ಜ್ಞಾನವೆಂಬ ಬೆಣ್ಣೆ ಸಿಗಬೇಕಾದರೆ ಅನುಭವಗಳ ಮಂಥನವಾಗಬೇಕು. ಹೀಗೆ ಮನೋಬುದ್ಧಿಗಳ ಸಾಂಗತ್ಯದಿಂದ ಜ್ಞಾನ ಲಾಭ, ಆನಂದ ಪ್ರಾಪ್ತಿಯಾಗುತ್ತದೆ.

## ‘ಯ’ ಕಾರಾಗಮ ಸಂಧಿಪದ ಗುರುತಿಸುವುದು

ಸಂಧಿಕಾರ್ಯ ನಡೆಯುವಾಗ ಪೂರ್ವಪದದ ಸ್ವರಾಂತ ಪದಗಳಿಗೆ ಉತ್ತರ ಪದದ ಮೊದಲ ಸ್ವರ ಸೇರಿದಾಗ ‘ಯ’ ಅಥವಾ ‘ವ’ ಕಾರ ಹೊಸತಾಗಿ ಆಗಮಿಸುತ್ತದೆ. ಇಲ್ಲಿ ‘ಯ’ ಕಾರ ಆಗಮವನ್ನು ಗಮನಿಸಬಹುದು. ಇಂತಹ ಪದಗಳನ್ನು ಈ ಪಾಠ ಮತ್ತು ಹಿಂದಿ ಪಾಠಗಳಿಂದ ಆರಿಸಿ ವಿಂಗಡಿಸಿ ಬರೆಯಲು ವಿದ್ಯಾರ್ಥಿಗಳಿಗೆ ಹೇಳುವುದು.

ಉದಾ : ಸಕ್ಕರೆಯಾಗಿ, ಸಿಹಿಯಷ್ಟು.
ಸಕ್ಕರೆ + ಆಗಿ
ಸಿಹಿ + ಅಷ್ಟು

### ಮುಕ್ತಕ/ಚುಟುಕು ರಚನಾ ಕಮ್ಮಟ

ಚುಟುಕೊಂದನ್ನು ಕೆಳಗೆ ಕೊಡಲಾಗಿದೆ. ಕಗ್ಗದಲ್ಲಿ ಬಂದಂತೆ ಲೋಕಾನುಭವದ ವಿಚಾರ ಇಲ್ಲಿಯೂ ಬಂದಿರುವುದನ್ನು ವಿದ್ಯಾರ್ಥಿಗಳು ತಿಳಿಯಲಿ. ಇಂತಹ ಚುಟುಕುಗಳನ್ನು ರಚಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಇದಕ್ಕಾಗಿ ಸಂಪನ್ಮೂಲ ವ್ಯಕ್ತಿಯೊಬ್ಬರನ್ನು ಕರೆಸಿ ಮಾರ್ಗದರ್ಶನ ನೀಡುವುದು.

**ದಾನ–ಧರ್ಮ**

ಕೈಲಾದ ರೀತಿಯಲಿ ಮಾಡಿದರೆ ದಾನ
ಆಪತ್ತಿಗಾಗುವುದು ಅದುವೆ ವರದಾನ
ಪರರ ಕಷ್ಟದಿ ನೆರವು ನೀಡುವುದೆ ಧರ್ಮ
ಪೊರೆವುದನುದಿನ ನಮ್ಮನಾ ಪುಣ್ಯ ಕರ್ಮ

–ರಮಾನಂದ ಬನಾರಿ

ಕಮ್ಮಟದಲ್ಲಿ ರಚಿತವಾದ ಚುಟುಕುಗಳನ್ನು ತರಗತಿಯಲ್ಲಿ ವಾಚಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ವಿದ್ಯಾರ್ಥಿಗಳು ಬರೆದ ಮುಕ್ತಕ/ಚುಟುಕುಗಳನ್ನು ತರಗತಿಯ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸುವಂತೆ ನಿರ್ದೇಶಿಸುವುದು.

## ಬಕ

### ಕನ್ನಡ ನಾಟಕ – ಬೆಳೆದು ಬಂದ ದಾರಿ

ನಾಟಕವೆಂಬುದು ಒಂದು ಸಾಹಿತ್ಯ ಪ್ರಕಾರ. ಇನ್ನೊಂದು ನೆಲೆಯಲ್ಲಿ ಅದೊಂದು ಸಮ್ಮಿಶ್ರ ಕಲೆ. ನಾಟಕವು ಪ್ರೇಕ್ಷಕನ ಭೌತಿಕ ಸಾಧ್ಯತೆಗಳನ್ನು ಅನುಸರಿಸಿ ಒಂದು ನಿಗದಿತ ಸಮಯದಲ್ಲಿ ನೋಡಿ ಮುಗಿಸುವಂಥದ್ದು. ನಾಟಕದ ದೃಶ್ಯಗಳು ಆಯಾ ಕಾಲದ ರಂಗಭೂಮಿಯ ಸಾಧ್ಯತೆಗಳನ್ನನುಸರಿಸಿ ಸಿದ್ಧವಾಗಿರಬೇಕು. ನಾಟಕವು ಒಂದು ಪ್ರಕಾರವಾಗಿ ವಿಶ್ವದಾದ್ಯಂತ ಮನ್ನಣೆಯನ್ನು ಪಡೆದಿದೆ. ಕಾಲದೇಶಗಳನ್ನನುಸರಿಸಿ ಅದು ಬಹುರೂಪವನ್ನು ಪಡೆದಿದೆ.

ನಾಟಕ ಒಂದು ಸಂಕೀರ್ಣ ಕಲೆ. ಇಲ್ಲಿ ಆಂಗಿಕ ಅಭಿನಯ, ಪಾತ್ರಪೋಷಣೆ, ಸಂವಿಧಾನ, ರಂಗಪರಿಕರ, ಸಂಗೀತ, ಮೇಳ ಮುಂತಾದವುಗಳನ್ನು ಸರಿಯಾಗಿ ದುಡಿಸಿಕೊಳ್ಳುವ ಅಗತ್ಯವಿದೆ. ಎಲ್ಲಕ್ಕಿಂತ ಮುಖ್ಯವಾಗಿ

ಪ್ರೇಕ್ಷಕ ವರ್ಗದ ಅಭಿರುಚಿಗೆ ಅನುಗುಣವಾಗಿ ನಾಟಕದ ವಸ್ತು, ತಂತ್ರ, ಕಾಲಕಾಲಕ್ಕೆ ಬದಲಾಗಬೇಕಾಗುತ್ತದೆ. ಸಾಮಾಜಿಕ ವಸ್ತು ವಿಷಯಗಳಾದ ಕೌಟುಂಬಿಕ ಕಲಹ, ಪ್ರೇಮ, ಮತ್ಸರ, ಸುಖಾಂತಗಳಿಂದ ಕೂಡಿದ ನಾಟಕಗಳಿವೆ. ಅಂತೆಯೇ ಬೇರೆ ಬೇರೆ ನಾಟಕಕಾರರು ಅನುಭವ ವಲಯದಿಂದ ಹೊಸತನವನ್ನು ಕಂಡುಕೊಂಡದ್ದರಿಂದ ಪೌರಾಣಿಕ, ವೃತ್ತಿ, ಹವ್ಯಾಸಿ ರಂಗಭೂಮಿಗಳು ಅಭಿವೃದ್ಧಿ ಹೊಂದಿ ಬಾನುಲಿ, ಬೀದಿ ನಾಟಕಗಳವರೆಗೆ ಹಂತ ಹಂತವಾಗಿ ಬೆಳೆದಿದೆ. ಈ ನಡುವೆ ನವ್ಯ ಸಾಹಿತ್ಯ ಚಳುವಳಿಯ ಪ್ರೇರಣೆಯಿಂದ 'ಅಸಂಗತ' ನಾಟಕಗಳೂ ಬಂದು ಹೋದವು.

ಕನ್ನಡದಲ್ಲಿ ನಾಟಕವೆಂಬ ಸಾಹಿತ್ಯ ಪ್ರಕಾರ ಹುಟ್ಟುವುದಕ್ಕೆ ಮೊದಲು ಅನೇಕ ಶತಮಾನಗಳಿಂದಲೂ ರಂಗಭೂಮಿ ಅಸ್ತಿತ್ವದಲ್ಲಿತ್ತು. ಈ ರಂಗಭೂಮಿಯನ್ನು ಜನಪದ ರಂಗಭೂಮಿಯೆಂದು ಕರೆಯುತ್ತಿದ್ದರು. ಬಾಯಿಂದ ಬಾಯಿಗೆ ತಲೆಮಾರುಗಳನ್ನು ಅನುಸರಿಸಿ ಈ ರಂಗಭೂಮಿ ಬೆಳೆದುಬಂದಿತ್ತು.

ಅಭಿಜಾತ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನಮಗೆ ನಾಟಕ ದೊರೆಯುವುದು ಹತ್ತೊಂಬತ್ತನೇ ಶತಮಾನದಲ್ಲಿ. ಈ ಪರಂಪರೆಯ ಮೊದಲ ನಾಟಕವೆಂದು 'ಸಿಂಗರಾರ್ಯ'ನ 'ಮಿತ್ರವಿಂದಾ ಗೋವಿಂದ'ವನ್ನು ಗುರುತಿಸಲಾಗುತ್ತದೆಯಾದರೂ ಅಧಿಕ ಸಂಖ್ಯೆಯಲ್ಲಿ ನಾಟಕಗಳು ಕಾಣಿಸಿಕೊಂಡದ್ದು ಹತ್ತೊಂಬತ್ತನೇ ಶತಮಾನದಲ್ಲಾಗಿದೆ. ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಯಿಂದ ಅನುವಾದಗೊಂಡ ಅಥವಾ ರೂಪಾಂತರಿಸಲಾದ ಅನೇಕ ನಾಟಕಗಳು ಈ ಕಾಲದಲ್ಲಿ ಬಂದಿವೆ. ಜನಪದ ರಂಗಭೂಮಿಯಂತೆ ವೃತ್ತಿ ರಂಗಭೂಮಿ, ಹವ್ಯಾಸಿ ರಂಗಭೂಮಿಗಳು ಕಾಣಿಸಿಕೊಂಡಿವೆ.

ಜನಪದ ರಂಗಭೂಮಿಯಲ್ಲಿ ಬಯಲಾಟಗಳಿದ್ದಂತೆ ವೃತ್ತಿ ರಂಗಭೂಮಿಯಲ್ಲಿ ಕಂಪೆನಿ ನಾಟಕಗಳಿವೆ. ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ಕಾಣಿಸಿಕೊಂಡ ವೃತ್ತಿ ರಂಗಭೂಮಿ ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಉಜ್ವಲಗೊಂಡಿತು. ವೃತ್ತಿ ರಂಗಭೂಮಿಗಾಗಿಯೇ ನಾಟಕ ರಚಿಸಿದ ಕನ್ನಡ ನಾಟಕಕಾರರ ಒಂದು ಪರಂಪರೆಯೇ ಇದೆ. ಶಾಂತಕವಿ, ನಂಜನಗೂಡು ಶ್ರೀಕಂಠಶಾಸ್ತ್ರಿ, ಬೆಳ್ಳಾವೆ ನರಹರಿ ಶಾಸ್ತ್ರಿ, ಗರೂಡ ಸದಾಶಿವರಾಯ, ಕೆನಗಲ್ ಹನುಮಂತರಾಯ, ಬಿ. ಪುಟ್ಟಸ್ವಾಮಯ್ಯ, ಗುಬ್ಬಿ ವೀರಣ್ಣ ಮುಂತಾದವರು ವೃತ್ತಿ ರಂಗಭೂಮಿಯ ಹಿಂದಿನ ನಾಟಕಕಾರರು.

ಆಧುನಿಕ ಕನ್ನಡ ನಾಟಕ ದೃಢವಾಗಿ ಬೇರೂರಿ ಬೆಳೆದದ್ದು ಇಪ್ಪತ್ತನೆಯ ಶತಮಾನದ ಆದಿಯಲ್ಲಿ. 1919ರಲ್ಲಿ ಪ್ರಕಟವಾದ 'ಟಿ.ಪಿ. ಕೈಲಾಸಂ' ರವರ 'ಟೊಳ್ಳುಗಟ್ಟಿ' ಸಾಮಾಜಿಕ ನಾಟಕ ಪರಂಪರೆಯನ್ನು ರಂಗಭೂಮಿಯಲ್ಲಿ ನೆಲೆಗೊಳಿಸಿದ ಮೊದಲ ನಾಟಕವಾಗಿದೆ. 'ಪ್ರಹಸನ ಪಿತಾಮಹ' ರೆಂದು ಪ್ರಸಿದ್ಧರಾಗಿದ್ದ ಕೈಲಾಸಂ ತಮ್ಮ ಹಲವು ಸಾಮಾಜಿಕ ನಾಟಕಗಳಲ್ಲಿ ಸಮಕಾಲೀನ ಸಮಾಜದ ಅಂಕುಡೊಂಕುಗಳನ್ನು ಬಹಳ ಸೊಗಸಾಗಿ ವಿಡಂಬಿಸಿದ್ದಾರೆ.

ಬಿ.ಎಂ. ಶ್ರೀಕಂಠಯ್ಯನವರು ಕನ್ನಡದಲ್ಲಿ ಸ್ವತಂತ್ರ ನಾಟಕಗಳನ್ನು ಬರೆದಿದ್ದರು. ಅವರು ಕನ್ನಡ ನಾಟಕ

ಪರಂಪರೆಗೆ ದುರಂತ ನಾಟಕದ ಮಾದರಿಯನ್ನು ಪರಿಚಯಿಸಿದರು. 10ನೇ ಶತಮಾನದ ಕವಿ ರನ್ನನನ್ನು ಅನುಸರಿಸಿ 'ಗದಾಯುದ್ಧ ನಾಟಕಂ', ಗ್ರೀಕ್ ಮೂಲದ 'ಅಜಾಕ್ಸ್' ನ್ನು ಅನುಸರಿಸಿ 'ಅಶ್ವತ್ಥಾಮನ್' ಮತ್ತು ಗ್ರೀಕ್ ನಾಟಕವೊಂದರ ಅನುವಾದವಾಗಿ 'ಪಾರಸೀಕರು' – ಹೀಗೆ ಅವರು ದುರಂತ ನಾಟಕದ ಮಾದರಿಗಳನ್ನು ರಚಿಸಿಕೊಟ್ಟರು.

ಶ್ರೀಯವರ ನಂತರದ ಮುಖ್ಯ ನಾಟಕಕಾರರೆಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ವಿ. ಪುಟ್ಟಪ್ಪ ಮತ್ತು ಪು.ತಿ. ನರಸಿಂಹಾಚಾರ್. ಇವರೆಲ್ಲಾ ವಸ್ತುವಿಗಾಗಿ ಪುರಾಣದ ಕತೆಗಳನ್ನು ಆಶ್ರಯಿಸಿದರು. ಮಾಸ್ತಿಯವರು ಐತಿಹಾಸಿಕ ವಿಷಯವನ್ನು ಎತ್ತಿಕೊಂಡು 'ಕಾಕನಕೋಟೆ', 'ತಾಳಿಕೋಟೆ' ಯಂತಹ ನಾಟಕಗಳನ್ನು ರಚಿಸಿದ್ದಾರೆ. ಪುರಾಣದ ಕತೆಯನ್ನು ಆಧುನಿಕ ಮೌಲ್ಯಗಳಿಗನುಸಾರವಾಗಿ ಪುನರ್ ರಚಿಸುವುದು ಕುವೆಂಪುರವರ ವೈಶಿಷ್ಟ್ಯ. 'ಶೂದ್ರತಪಸ್ವಿ', 'ಬೆರಳ್‌ಗೆ ಕೊರಳ್', 'ಚಂದ್ರಹಾಸ', 'ಸ್ಮಶಾನ ಕುರುಕ್ಷೇತ್ರ' ಇವು ಇವರ ಪೌರಾಣಿಕ ನಾಟಕಗಳು. 'ರಕ್ತಾಕ್ಷಿ'ಯಂತಹ ಚಾರಿತ್ರಿಕ ನಾಟಕವನ್ನೂ ಅನೇಕ ಮಕ್ಕಳ ನಾಟಕಗಳನ್ನೂ ರಚಿಸಿದ್ದಾರೆ. ಪು.ತಿ. ನರಸಿಂಹಾಚಾರ್ಯರು 'ಅಹಲ್ಯೆ', 'ಗೋಕುಲ ನಿರ್ಗಮನ', 'ಸತ್ಯಾಯನ ಹರಿಶ್ಚಂದ್ರ', 'ವಿಕಟಕವಿ ವಿಜಯ'ದಂತಹ ಕೆಲವು ನಾಟಕಗಳನ್ನು ರಚಿಸಿದ್ದಾರೆ. ಕನ್ನಡದ ಮುಖ್ಯ ಕವಿಗಳಲ್ಲಿ ಒಬ್ಬರಾದ ಬೇಂದ್ರೆಯವರು 'ಸಾಯೋ ಆಟ', 'ಜಾತ್ರೆ', 'ದೆವ್ವದ ಮನೆ', 'ಹಳೆಯ ಗೆಳೆಯರು' ಎಂಬ ವಿಡಂಬನಾತ್ಮಕ ನಾಟಕಗಳನ್ನು ರಚಿಸಿರುವರು. 'ಉದ್ಧಾರ' ಮತ್ತು 'ನಗೆಯ ಹೊಗೆ' ಇವರ ಗಂಭೀರ ನಾಟಕಗಳಾಗಿವೆ.

ಶ್ರೀರಂಗರು 'ಕೈಲಾಸಂ' ಬಳಿಕ ಸಾಮಾಜಿಕ ನಾಟಕ ಪರಂಪರೆಯನ್ನು ಮುಂದುವರಿಸಿದ ಮುಖ್ಯ ನಾಟಕಕಾರರು. ತೀವ್ರವಾದ ವಿಡಂಬನೆ, ಸಾಮಾಜಿಕ ಒಳನೋಟ ಅವರ ನಾಟಕಗಳಲ್ಲಿ ಎದ್ದುಕಾಣುವ ಅಂಶ. 'ಸಂಧ್ಯಾಕಾಲ', 'ಹರಿಜನ್ವಾರ', 'ಕೇಳುಜನಮೇಜಯ', 'ಕತ್ತಲೆ ಬೆಳಕು', 'ಸ್ವರ್ಗಕ್ಕೆ ಮೂರೇ ಬಾಗಿಲು' ಮುಂತಾದವು ಇವರ ಮುಖ್ಯ ನಾಟಕಗಳು. ಸಾಮಾಜಿಕ ವಸ್ತುವನ್ನೇ ಅಶ್ರಯಿಸಿ ಗೀತನಾಟಕಗಳನ್ನು ರಚಿಸಿದ ನಾಟಕಕಾರರನ್ನಾಗಿ 'ಶಿವರಾಮ ಕಾರಂತ'ರನ್ನು ಗುರುತಿಸಬಹುದಾಗಿದೆ.

ಕನ್ನಡ ನಾಟಕ ಪರಂಪರೆಯಲ್ಲಿ ನವ್ಯತೆಯ ಗಾಳಿ ಬೀಸಿ ಅರುವತ್ತರ ದಶಕದಿಂದೀಚೆಗೆ ಹಲವು ಉತ್ತಮ ನಾಟಕಕಾರರು ಬೆಳಕಿಗೆ ಬಂದರು. ರಂಗ ಪ್ರಜ್ಞೆಗೆ ಹೆಸರಾದ ಈ ನಾಟಕಕಾರರಲ್ಲಿ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಪಿ. ಲಂಕೇಶ್, ಚಂದ್ರಶೇಖರ ಪಾಟೀಲರು ಮುಖ್ಯರು.

## ಪ್ರವೇಶ

ಕನ್ನಡದಲ್ಲಿ ಸಂಸ್ಕೃತ ನಾಟಕಗಳ ಭಾಷಾಂತರದ ಮೂಲಕ ನಾಟಕ ಸಾಹಿತ್ಯ ಆರಂಭವಾಯಿತು. ಬಳಿಕ ಸ್ವತಂತ್ರ ನಾಟಕಗಳು ಬರತೊಡಗಿದವು. ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ' ಕನ್ನಡದ ಮೊದಲನೆಯ ನಾಟಕವಾಗಿ ಗುರುತಿಸಲ್ಪಡುತ್ತದೆ. ಕನ್ನಡದಲ್ಲಿ ಕುವೆಂಪು, ಟಿ.ಪಿ. ಕೈಲಾಸಂ, ಶ್ರೀರಂಗ, ಪರ್ವತವಾಣಿ, ಗಿರೀಶ್

ಕಾರ್ನಾಡ್ ಮೊದಲಾದವರು ಈ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ.

ಸಮಾಜದ ಕುಂದು ಕೊರತೆಗಳ ಬಗ್ಗೆ, ಜನರ ಗುಣ ಸ್ವಭಾವಗಳ ಬಗ್ಗೆ ಚಿಕಿತ್ಸಕ ದೃಷ್ಟಿಯನ್ನು ಬೀರುವ ನಾಟಕಗಳು ಕನ್ನಡದಲ್ಲಿ ಸಮೃದ್ಧವಾಗಿವೆ. ಟಿ.ಪಿ.ಕೈಲಾಸಂ, ಶ್ರೀರಂಗ ಮೊದಲಾದವರು ಈ ನಿಟ್ಟಿನಲ್ಲಿ ಮಾಡಿದ ಪ್ರಯೋಗಗಳ ಮುಂದುವರಿಕೆಯನ್ನು ಗಿರೀಶ್ ಕರ್ನಾಡ್, ಎಂ.ಎಸ್.ಕೆ. ಪ್ರಭು ಮುಂತಾದವರ ಕೃತಿಗಳಲ್ಲಿ ಕಾಣುತ್ತೇವೆ.

ಪುರಾಣದ ವಸ್ತುವನ್ನೆತ್ತಿಕೊಂಡು ಅದರಲ್ಲಿ ವರ್ತಮಾನದ ಬದುಕಿಗೂ ಸಂಗತವಾಗುವ ಅರ್ಥವನ್ನು ಧ್ವನಿಸುವ ನಾಟಕವಾಗಿ 'ಬಕ' ಗಮನ ಸೆಳೆಯುತ್ತದೆ. ಬಕಾಸುರನನ್ನು ಭೀಮ ಕೊಂದು ಏಕಚಕ್ರನಗರದ ಜನರನ್ನು ಕಾಪಾಡಿದ್ದು ಪೌರಾಣಿಕ ಕತೆ. ಆ ಪುರಾಣ ಕತೆಯ ಚೌಕಟ್ಟಿನಲ್ಲಿ ವ್ಯವಸ್ಥೆಯ ಕರಾಳ ಬಾಹುಗಳಿಗೆ ಸಿಲುಕಿ ನಲುಗುವ ಜನಸಾಮಾನ್ಯರ ಪಾಡನ್ನು ಸಾಂಕೇತಿಕವಾಗಿ ಧ್ವನಿಸಿರುವುದು ಈ ನಾಟಕದ ಹಿರಿಮೆ.

ವಿದ್ಯಾರ್ಥಿಗಳಿಗೆ ನಾಟಕಗಳ ಕುರಿತು ಇರುವ ಜ್ಞಾನವನ್ನು ಅರಿತುಕೊಳ್ಳಲು ಅವರು ಓದಿದ ನಾಟಕಗಳ ಕುರಿತು ತಿಳಿಸುವಂತೆ ಸೂಚಿಸುವುದು 8, 9 10ನೇ ತರಗತಿಗಳಲ್ಲಿ ತಾವು ಕಲಿತ ನಾಟಕಗಳ ಕುರಿತು ನೆನಪಿರುವ ಅಂಶಗಳನ್ನು ವಿದ್ಯಾರ್ಥಿಗಳು ಹೇಳಲಿ. ನಾಟಕದಲ್ಲಿ ಇರಬೇಕಾದ ಪ್ರಧಾನವಾದ ಅಂಶಗಳು ಏನೆಲ್ಲ? ನಾಟಕವನ್ನು ರಂಗದಲ್ಲಿ ಪ್ರದರ್ಶಿಸುವಾಗ ಯಾವೆಲ್ಲ ಪೂರ್ವಸಿದ್ಧತೆ ಅಗತ್ಯವಿದೆ? ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳು ಉತ್ತರಿಸಲಿ. ನಾಟಕದಲ್ಲಿ ಇರಬೇಕಾದ ಮುಖ್ಯ ಅಂಶಗಳನ್ನು ವಿದ್ಯಾರ್ಥಿಗಳ ಉತ್ತರದಿಂದ ಸಂಗ್ರಹಿಸಿ ಕ್ರೋಡೀಕರಿಸಿ ನಿಗಮನಕ್ಕೆ ಬರುವುದು. ನಾಟಕದಲ್ಲಿ ಅಭಿನಯಿಸಿದ ಅನುಭವವುಳ್ಳ ವಿದ್ಯಾರ್ಥಿಗಳಿಂದ ತಮ್ಮ ಅನುಭವಗಳನ್ನು ಹೇಳಿಸುವುದು.

'ಬಕ' ಬಕಾಸುರನ ಪಾತ್ರವನ್ನು ಪ್ರಧಾನವಾಗಿರಿಸಿ ರಚಿಸಲ್ಪಟ್ಟ ನಾಟಕವಾಗಿದೆ. ಬಕಾಸುರನ ಕುರಿತಾದ ಪುರಾಣ ಕತೆಯನ್ನು ವಿದ್ಯಾರ್ಥಿಗಳು ತಿಳಿದಿರುತ್ತಾರೆ. ವಿದ್ಯಾರ್ಥಿಗಳಿಂದಲೇ ಆ ಕತೆಯನ್ನು ತರಗತಿಯಲ್ಲಿ ಹೇಳಿಸುವುದು.

**ಚಟುವಟಿಕೆಗಳು**

**ಓದುವುದು**

ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿಕೊಂಡು ಅವರನ್ನು ಕೆಲವು ಗುಂಪುಗಳನ್ನಾಗಿ ಮಾಡುವುದು. ಪ್ರತಿ ಗುಂಪಿಗೆ ನಾಟಕದ ನಿರ್ದಿಷ್ಟ ದೃಶ್ಯಗಳನ್ನು ನೀಡುವುದು. ತಮಗೆ ಲಭಿಸಿದ ದೃಶ್ಯದಲ್ಲಿ ಬಂದಿರುವ ಪಾತ್ರಗಳನ್ನು ಗುಂಪಿನವರೆ ತಮ್ಮೊಳಗೆ ಹಂಚಿಕೊಳ್ಳಲಿ. ಓದಿಕೊಂಡು ತಯಾರಿ ನಡೆಸಲು ಸಾಕಷ್ಟು ಸಮಯ ನೀಡಿದ ಬಳಿಕ ತರಗತಿಯಲ್ಲಿ ನಾಟಕವನ್ನು ಪಾತ್ರಗಳ ಭಾವನೆಗೆ ಅನುಗುಣವಾಗಿ ಓದಿಸುವುದು.

### ಶಿಷ್ಟರೂಪಕ್ಕೆ ಪರಿವರ್ತಿಸುವುದು

ಬಕ ನಾಟಕದಲ್ಲಿ ಗ್ರಾಮ್ಯ ಶೈಲಿಯ ಭಾಷಾ ಪ್ರಯೋಗವನ್ನು ಕಾಣಬಹುದು. ಈ ಆಡುನುಡಿಗಳನ್ನು ಶಿಷ್ಟರೂಪಕ್ಕೆ ಪರಿವರ್ತಿಸಲು ಹೇಳುವುದು.

ಉದಾ :

- "ಲೇ ಹೈದಾ, ಏಟೊಂದು ಮಾತಾಡ್ತಿಯಲೇ ನೀನು. ನೀನುಟ್ಟುಕ್ ಮುಂಚಿಂದಾ ನಾ ಅರ್ಮನೇಲಿ ಕೆಲ್ಸ ಮಾಡ್ತಿದೀನಿ ಗೊತ್ತಾ?"

ಇಂತಹ ಇನ್ನಷ್ಟು ವಾಕ್ಯಗಳನ್ನು ವಿದ್ಯಾರ್ಥಿಗಳು ನಾಟಕದಿಂದ ಆಯ್ದುಕೊಳ್ಳಲಿ. ಚಟುವಟಿಕೆಯನ್ನು ನಡೆಸಿ ಲೋಗ್‌ಬುಕ್‌ನಲ್ಲಿ ಸೇರಿಸಿಕೊಳ್ಳಲಿ.

### ಓದಿನ ಟಿಪ್ಪಣಿ ಬರೆಯುವುದು

ಬಕ ನಾಟಕವನ್ನು ವಿದ್ಯಾರ್ಥಿಗಳು ಮೌನವಾಗಿ ಓದಿ ವೈಯಕ್ತಿಕವಾಗಿ ನಾಟಕದ ಓದಿನ ಟಿಪ್ಪಣಿ ಬರೆಯಲಿ. ಪರಸ್ಪರ ಮೌಲ್ಯಮಾಪನ ಮಾಡಿ ಟಿಪ್ಪಣಿಯನ್ನು ಪರಿಷ್ಕರಿಸಿಕೊಳ್ಳಲಿ.

### ಏಕಚಕ್ರ ನಗರದ ಜನತೆ ತಮ್ಮ ಬದುಕಿನಲ್ಲಿ ಆಸಕ್ತಿಯನ್ನು ಕಳೆದುಕೊಂಡಿರಲು ಕಾರಣ

ಏಕಚಕ್ರನಗರದ ರಾಜ ಹಾಗೂ ಬಕಾಸುರನ ನಡುವೆ ಏರ್ಪಟ್ಟ ಶಾಂತಿ ಒಪ್ಪಂದವೇ ಜನತೆಯ ಬದುಕಿನ ಆಸಕ್ತಿಯನ್ನು ಕಳೆದುಕೊಳ್ಳುವಂತೆ ಮಾಡಿದೆ. ಈ ಒಪ್ಪಂದ 'ಸಂವಿಧಾನ'ವಾಗಿ ನಗರದ ಪ್ರತಿ ಮನೆಯವರನ್ನು ಕಾಡುವ ವಿಷಯವಾದುದರಿಂದ, ಅದರ ಪರಿಣಾಮ ಘೋರವಾದುದರಿಂದ ಜನತೆಯಲ್ಲಿ ಭಯ, ಹೆದರಿಕೆ ಮೂಡಿದೆ. " ಪ್ರಜೆಗಳ ರಕ್ಷಣೆಗೆ, ಪ್ರಜೆಗಳ ಪರವಾಗಿ ಪ್ರಜೆಗಳಿಗೋಸ್ಕರ ಪ್ರಜೆಗಳೇ ಮಹಾರಾಜರ ಮೂಲಕ ಮಾಡಿಕೊಂಡ ಈ ಒಪ್ಪಂದ" ದಂತೆ ಸರದಿ ಪ್ರಕಾರ ಒಂದು ಬಂಡಿ ಅನ್ನ, ಎರಡು ಕೋಣ, ಒಬ್ಬ ಆಳನ್ನು ದಿನಾ ಬಕಾಸುರನ ಗುಹೆಗೆ ಕಳುಹಿಸಬೇಕು. ನಗರಪಾಲಕ ಬರೆದ ಪಟ್ಟಿಯಂತೆ ಸರದಿ ನಿಗದಿಯಾಗುತ್ತದೆ. ತಮ್ಮ ಸರದಿಯನ್ನು ನೆನಪಿಸಿಕೊಂಡಾಗ ಜನತೆಗೆ ಬದುಕೇ ಬೇಡವಾಗಿ ಅವರು ನಿರಾಶರಾಗಿದ್ದಾರೆ.

### ರಾಜ ಮತ್ತು ಬಕನ ನಡುವೆ ನಡೆದ ಒಪ್ಪಂದ

ಬಕಾಸುರನ ಉಪಟಳದಿಂದ ರಕ್ಷಣೆಯನ್ನು ಪಡೆಯಲು ಹಾಗೂ ಅಧಿಕಾರವು ಸುರಕ್ಷಿತವಾಗಿ ಉಳಿಯುವಂತಾಗಲು ಏಕಚಕ್ರ ನಗರದ ರಾಜನು 'ಬಕ'ನೊಂದಿಗೆ ಒಪ್ಪಂದವೊಂದನ್ನು ಮಾಡಿಕೊಳ್ಳುತ್ತಾನೆ. ಅದು ಬಕ ಹಾಗೂ ರಾಜನ ನಡುವೆ ನಡೆದ 'ಶಾಂತಿ–ಒಪ್ಪಂದ'ವಾಗುತ್ತದೆ. ಅದರಂತೆ ದಿನನಿತ್ಯ ಬಕಾಸುರನ ಹಸಿವೆಯನ್ನು ನೀಗಿಸಲು ಅಗತ್ಯವಾದ ಆಹಾರವನ್ನು ರಾಜನು ಪ್ರಜೆಗಳ ಮೂಲಕ ವ್ಯವಸ್ಥೆ ಮಾಡುವುದು.

ಬದಲಾಗಿ ಬಕನು ನಗರವನ್ನು ಕಳ್ಳಕಾಕರಿಂದ, ದುಷ್ಟಪ್ರಾಣಿಗಳಿಂದ ರಕ್ಷಿಸುವುದುಈ ಒಪ್ಪಂದಕ್ಕೆ ಸಾಕ್ಷಿಯಾಗಿ ನಗರಪಾಲಕ, ಸೂತ್ರಧಾರ, ಕಾವಲುಭಟರ ಸಹಿಯೊಂದಿಗೆ ಬಕಾಸುರ ಹಾಗೂ ರಾಜನ ರುಜುವಾಗುತ್ತದೆ. ಅದರಂತೆ ಏಕಚಕ್ರ ನಗರದ ಪ್ರಜೆಗಳು ಸರದಿ ಪ್ರಕಾರ ಪ್ರತಿದಿನ ಬಕಾಸುರನ ಗುಹೆಯ ಬಳಿಗೆ ಬಂದು ಆಹಾರವನ್ನು ಒದಗಿಸಬೇಕು. ಆ ಆಹಾರದಲ್ಲಿ ಒಬ್ಬ ಮನುಷ್ಯ, ಎರಡುಕೋಳಿ, ಎರಡು ಕೋಣ, ಒಂದು ಬಂಡಿ ತುಂಬಾ ಅನ್ನ, ಸಾರು, ಸಾಂಬಾರು, ತುಪ್ಪ, ಉಪ್ಪಿನಕಾಯಿ, ಹಪ್ಪಳ, ಚಟ್ನಿಪುಡಿ, ಎರಡು ಗಡಿಗೆ ಕಳ್ಳು ಸೇರಿರಬೇಕು. ಎಲ್ಲಿಯಾದರೂ ಒಂದು ದಿನ ಈ ವ್ಯವಸ್ಥೆಗೆ ಭಂಗ ಬಂದರೆ ಕರಾರು ಜಾರಿಯಲ್ಲಿರುವುದಿಲ್ಲ ಎಂಬ ಶರ್ತವನ್ನು ಬಕಾಸುರನು ರಾಜನಿಗೆ ತಿಳಿಸುತ್ತಾನೆ. ಕರಾರಿನ ಏರ್ಪಾಡನ್ನು ತಪ್ಪದೆ ಜಾರಿಗೆ ಬರುವಂತೆ ನೋಡಿಕೊಳ್ಳುವ ಕರ್ತವ್ಯ ನಗರ ಪಾಲಕನ ಹೆಗಲೇರುತ್ತದೆ.

**ಜನರ ಅಸಹಾಯಕತೆಯನ್ನು ಬಂಡವಾಳ ಶಾಹಿಗಳು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡ ಬಗೆ–**

ಶ್ರೀಮಂತರ, ಹಣವಂತರ, ಅಧಿಕಾರದರ್ಪದ ಮುಂದೆ ಸಾಮಾನ್ಯ ಜನರಿಗೆ ಬೆಲೆಯಿಲ್ಲ. ಅವರ ಗೋಳನ್ನು ಕೇಳುವವರೇ ಇಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ 'ಬಕ' ನಾಟಕ. ಸಾಮಾನ್ಯ ಜನರ ಅಸಹಾಯಕ ಬದುಕಿನ ಮುಂದೆ ರಾರಾಜಿಸುವ ಬಂಡವಾಳ ಶಾಹಿಗಳ ಚಿತ್ರಣವನ್ನು ಮನಮುಟ್ಟುವಂತೆ ಈ ನಾಟಕದಲ್ಲಿ ಚಿತ್ರಿಸಲಾಗಿದೆ. ಊರಿಗೆ ಊರೇ ಬಡತನದಿಂದ ಕಷ್ಟವನ್ನು ಅನುಭವಿಸುತ್ತಿದ್ದರೂ, ಜನರಿಗೆ ತಮ್ಮಿಂದಾಗುವ ಸಹಾಯವನ್ನು ಮಾಡುವುದು ಬಿಟ್ಟು ವ್ಯಾಪಾರದ ಮೂಲಕ ಲಾಭವನ್ನು ಗಳಿಸಿ ಶ್ರೀಮಂತರಾಗುವ ಯೋಚನೆಯನ್ನು ಇಲ್ಲಿನ ವರ್ತಕ ಪಾತ್ರಗಳು ವ್ಯಕ್ತಪಡಿಸುತ್ತವೆ.

ಬಕಾಸುರನ ಉಪಟಳದಿಂದ ರಕ್ಷಣೆಯನ್ನು ಪಡೆಯಲು ಇಡೀ ನಗರವೇ ದಿಕ್ಕು ತೋಚದೇ ಬೆರಗಾಗಿದ್ದಾಗ ನಗರ ಪಾಲಕನ ಜತೆ ಸೇರಿ ವರ್ತಕ1, ವರ್ತಕ2, ವರ್ತಕ3 ಮಾಡುವ ಸ್ವಾರ್ಥಸಾಧನೆ ಹೀನವಾದುದು. ಏಕಚಕ್ರನಗರದ ಸಾಮಾನ್ಯ ಪ್ರಜೆಗಳಿಗೆ ಬಕಾಸುರನು ಬಕನಾಗಿದ್ದರೆ, ವರ್ತಕರಿಗೆ ಬಕಾಸುರನು ದಯೆಯನ್ನು ಕರುಣಿಸಿದ ವ್ಯಕ್ತಿಯಾಗಿದ್ದಾನೆ. ಅವನ ದಯೆಯಿಂದ ಅವರ ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭವಾಗುತ್ತದೆ. ಬಕ ಹಾಗೂ ರಾಜನ ನಡುವೆ ನಡೆದ ಕರಾರು ಅವರನ್ನು ಸುಖ ಜೀವಿಗಳಾಗುವಂತೆ ಮಾಡಿದೆ. ಎಷ್ಟೇ ವಸ್ತುಗಳನ್ನು ತಂದಿಟ್ಟರೂ ಅವೆಲ್ಲವೂ ಬಕನಿಗಾಗಿ ಪ್ರಜೆಗಳ ಮೂಲಕ ವ್ಯಾಪಾರವಾಗಿ ಹಣ ಸಲ್ಲುತ್ತಿತ್ತು. ವರ್ತಕರಿಗೆ ಕೈ ತುಂಬ ಲಾಭವಾಗುತ್ತಿತ್ತು. ಅಗತ್ಯ ವಸ್ತುಗಳನ್ನು ವರ್ತಕರಿಗೆ ಒದಗಿಸುವ ನೆಪವನ್ನಿಟ್ಟುಕೊಂಡು ದವಸ ಧಾನ್ಯಗಳ ಬೆಲೆಯನ್ನು ಏರಿಸುತ್ತಲೇ ಹೋಗುತ್ತಾರೆ. ಇನ್ನುಹೆಚ್ಚಿನ ವ್ಯಾಪಾರ ಮಾಡುವ ಉದ್ದೇಶದೊಂದಿಗೆ ಎಲ್ಲಾ ವಸ್ತುಗಳ ವ್ಯಾಪಾರ ಮಾಡುವ ಬದಲು ಒಬ್ಬೊಬ್ಬರು ಒಂದೊಂದು ವಸ್ತುವನ್ನು ವ್ಯಾಪಾರ ಮಾಡುವ ಯೋಚನೆಯನ್ನು ಮಾಡುತ್ತಾರೆ. ಅದರಂತೆ ಅಕ್ಕಿ, ಗೋಧಿ, ಬೇಳೆ, ಎಣ್ಣೆ, ಉಪ್ಪು, ಮೆಣಸಿನ ಕಾಯಿ, ಕೋಣಗಳ ವ್ಯಾಪಾರಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ಪ್ರಜೆಗಳು ತಮ್ಮ ಬಳಿ ಬಂದಾಗ ತಮ್ಮಲ್ಲಿಲ್ಲದ ವಸ್ತುಗಳನ್ನು ಕೊಂಡುಕೊಳ್ಳಲು ತನ್ನ ಗೆಳೆಯ ವರ್ತಕನಲ್ಲಿಗೆ ಕಳುಹಿಸುತ್ತಾರೆ. ಬಕನಿಗೆ ಆಹಾರವನ್ನು ಕೊಡುವ ಸರದಿ ತಮ್ಮದಾದಾಗ ನಗರಪಾಲಕನಿಗೆ ಲಂಚದ ಆಮಿಷವನ್ನೊಡ್ಡಿ ಬಚಾವಾಗುತ್ತಾರೆ.

## ಪಾತ್ರಚಿತ್ರಣ

ನಾಟಕದಲ್ಲಿ ವಿದ್ಯಾರ್ಥಿಗಳಿಗೆ ಮೆಚ್ಚುಗೆಯಾದ ಪಾತ್ರದ ಕುರಿತು ಪ್ರಶ್ನಿಸುವುದು. ಆ ಪಾತ್ರಗಳು ಯಾಕೆ ಮೆಚ್ಚುಗೆಯಾದುವು? ಎಂಬುದರ ಕುರಿತು ಮುಕ್ತ ಚರ್ಚೆಯ ಮೂಲಕ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ತರಗತಿಯಲ್ಲಿ ಮಂಡಿಸಲಿ. ಹೀಗೆ ಎಲ್ಲರಿಗೂ ಸ್ಪಷ್ಟ ಮಾಹಿತಿ ಲಭಿಸಿದ ಬಳಿಕ ತಮಗೆ ಮೆಚ್ಚುಗೆಯಾದ ಪಾತ್ರದ ಕುರಿತು ಬರೆದು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಲಹೆಯಂತೆ ತಮ್ಮ ಬರಹವನ್ನು ಪರಿಷ್ಕರಿಸಿಕೊಳ್ಳಲಿ.

ಈ ಕೆಳಗಿನ ಪಾತ್ರಗಳ ಪಾತ್ರಚಿತ್ರಣವನ್ನು ಬರೆಯಬಹುದು.

- ಬಕ

'ಬಕ' ನಾಟಕದ ನಗರಪಾಲಕನ ಪಾತ್ರಚಿತ್ರಣವನ್ನು ಈ ಕೆಳಗಿನಂತೆಯೂ ಬರೆಯಬಹುದು.

**ನಗರಪಾಲಕ:**

ಎಂ.ಎಸ್.ಕೆ. ಪ್ರಭು ಅವರ ಬರೆದ 'ಬಕ' ನಾಟಕದ ಪ್ರಮುಖ ಪಾತ್ರಗಳಲ್ಲಿ ಒಬ್ಬನಾಗಿದ್ದಾನೆ ನಗರಪಾಲಕ. ನಾಟಕದ ಕಥೆಗೆ ತನ್ನ ಚಾಣಕ್ಯ ಸ್ವಭಾವದ ಮೂಲಕ ಈತ ಮೆರುಗನ್ನು ನೀಡಿದ್ದಾನೆ. ಆತನದ್ದು ಸ್ವಾರ್ಥ ಚಿಂತನೆಯಾಗಿದ್ದರೂ ನಾಟಕದ ಬೆಳವಣಿಗೆಯಲ್ಲಿ ಅದು ಅನಿವಾರ್ಯ. ಬಕನ ಉಪಟಳದಿಂದ ಪ್ರಜೆಗಳನ್ನು ಮತ್ತು ರಾಜನನ್ನು ರಕ್ಷಿಸಲು ಆತ ಉಪಾಯ ಹೂಡುತ್ತಾನೆ. ಬಕನು ನಗರದೊಳಗೆ ಪ್ರವೇಶಿಸದಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾನೆ. ರಾಜನೊಂದಿಗೆ ಸೇರಿ 'ಪ್ರಜೆಗಳ ರಕ್ಷಣೆಗೆ, ಪ್ರಜೆಗಳಿಗೊಸ್ಕರ " ಬಕನೊಂದಿಗೆ ಮಾಡಿಕೊಂಡ ಒಪ್ಪಂದದ ರೂವಾರಿ ಈತ. ಅದರಂತೆ ಪ್ರತಿದಿನ ಸರದಿ ಪ್ರಕಾರ ಏಕಚಕ್ರ ನಗರದ ಪ್ರಜೆಗಳು ಬಕನ ಗುಹೆಯ ಬಳಿಗೆ ಆಹಾರವನ್ನು ತಂದೊದಗಿಸಬೇಕು. ಒಬ್ಬ ಮನುಷ್ಯ, ಎರಡು ಕೋಳಿ, ಅನ್ನ, ಕೋಣಗಳು, ಕಳ್ಳು ಮುಂತಾದವು ಅದರಲ್ಲಿ ಸೇರಿರಬೇಕು. ಈ ಒಪ್ಪಂದ ನಗರಪಾಲಕನನ್ನು ಖಳನಾಯಕನ ಸ್ಥಾನದಲ್ಲಿ ನಿಲ್ಲಿಸುತ್ತದೆ.

ರಾಜನ ಕೈಕೆಳಗಿನ ಭ್ರಷ್ಟ ಅಧಿಕಾರಿಯಾಗಿದ್ದಾನೆ ನಗರಪಾಲಕ. ಬಕ ಹಾಗೂ ರಾಜನ ನಡುವಿನ ಕರಾರು ಭಂಗವಾಗದಂತೆ ನೋಡಿಕೊಳ್ಳುವುದು ಆತನ ಕೆಲಸ. ಆತನು ಬಕನೊಂದಿಗೆ ಮಾಡಿಕೊಂಡ ಒಪ್ಪಂದ ಕೆಲವು ವರ್ತಕರನ್ನು ದಿನದಿಂದ ದಿನಕ್ಕೆ ಶ್ರೀಮಂತರಾಗುವಂತೆ ಮಾಡಿದೆ. ಬಕನಿಗೆ ಆಹಾರವನ್ನೊದಗಿಸುವ ಸರದಿ ವರ್ತಕರಿಗೆ ಬಂದಾಗ ಲಂಚದ ಆಮಿಷಕ್ಕೆ ಬಲಿಯಾಗಿ ಅವರನ್ನು ನಗರಪಾಲಕನು ರಕ್ಷಿಸುತ್ತಾನೆ. ಖಂಡುಗ ಗಟ್ಟಲೆ ವರ್ತಕರು ನೀಡುವ ಗೋಧಿ, ಅಕ್ಕಿ ಮೊದಲಾದ ನಿತ್ಯೋಪಯೋಗಿ ವಸ್ತುಗಳ ಆಸೆಗೆ ಬಲಿಯಾಗಿ ಉಪಾಯದಿಂದ ಆ ವಾರದ ಸರದಿಯನ್ನು ಬೇರೆಯವರಿಗೆ ದಾಟುವಂತೆ ನೋಡಿಕೊಳ್ಳುತ್ತಾನೆ. ತನ್ನ ವಿರುದ್ಧ ಭ್ರಷ್ಟಾಚಾರದ ಆರೋಪ ಬಂದಾಗ ವರ್ತಕರ ಜತೆ ಸೇರಿ ತಪ್ಪಿಸಿಕೊಳ್ಳುವ ಉಪಾಯವನ್ನು ಆಲೋಚಿಸುತ್ತಾನೆ.

ತನಗಿರುವ ಅಧಿಕಾರದಿಂದ ತಪ್ಪಿತಸ್ಥರಲ್ಲದವರ ವಿರುದ್ಧ ಸುಳ್ಳು ಆಪಾದನೆ ಹೋರಿಸಿ ಚರಣದಾಸನೇ ಮೊದಲಾದ ರೈತರಿಗೆ ಶಿಕ್ಷೆಯನ್ನು ವಿಧಿಸುವಲ್ಲಿ ಯಶಸ್ವಿಯಾಗುತ್ತಾನೆ. ಶ್ರೀಮಂತ ವರ್ತಕರ ಬದಲು ಈ ಬಡಪಾಯಿಗಳು ಬಕನಿಗೆ ಆಹಾರವನ್ನೊದಗಿಸುವ ಶಿಕ್ಷೆಗೆ ಒಳಗಾಗುತ್ತಾರೆ. ತಪ್ಪಿದಲ್ಲಿ ಅವರೇ ಬಕನಿಗೆ ಬಲಿಯಾಗಬೇಕು. ಹೀಗೆ ನಾಟಕದುದ್ದಕ್ಕೂ ಅಧಿಕಾರ ಹಾಗೂ ಹಣದ ಆಸೆಗೆ ಬಲಿಯಾಗಿ ದುರಾಲೋಚನೆಯೊಂದಿಗೆ ಏಕಚಕ್ರನಗರದ ಸ್ವಾಸ್ಥ್ಯವನ್ನು ಕದಡುವ ನಗರಪಾಲಕನನ್ನು ಕಾಣಬಹುದು.

## ರಂಗ ಪರಿಕರಗಳ ಪಟ್ಟಿ ತಯಾರಿ

ಶಾಲಾ ವಾರ್ಷಿಕೋತ್ಸವದ ಸಂದರ್ಭದಲ್ಲಿ 'ಬಕ' ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಲಿದ್ದಾರೆ. ಅದಕ್ಕೆ ಬೇಕಾದ ಸಿದ್ಧತೆಯನ್ನು ವಿದ್ಯಾರ್ಥಿಗಳು ಮಾಡಿಕೊಳ್ಳುವಂತೆ ಸೂಚಿಸುವುದು. ವಿದ್ಯಾರ್ಥಿಗಳು ಗುಂಪುಗಳಾಗಿ ಪಾತ್ರಗಳನ್ನು ಹಂಚಿಕೊಂಡು ಅಭಿನಯಕ್ಕೆ ಬೇಕಾದ ತಯಾರಿ ನಡೆಸಲಿ. ಪ್ರತಿ ಗುಂಪಿಗೂ ಅಧ್ಯಾಪಕರು ಬೇಕಾದ ಸಲಹೆ, ಸಹಕಾರಗಳನ್ನು ಒದಗಿಸುವುದು. 'ಬಕ' ನಾಟಕದ ಅಭಿನಯದ ವೇಳೆ ರಂಗ ಸಜ್ಜಿಕೆಗಾಗಿ ಏನೆಲ್ಲ ವಸ್ತುಗಳ ಅಗತ್ಯವಿದೆ ಎಂಬುದರ ಪಟ್ಟಿ ತಯಾರಿಸುವಂತೆ ಸೂಚಿಸುವುದು. ಅದನ್ನು ರಂಗದಲ್ಲಿ ಹೇಗೆ ಯಶಸ್ವಿಯಾಗಿ ನಿರ್ವಹಿಸಬಹುದು ಎಂಬ ಚರ್ಚೆಯೂ ನಡೆಯಲಿ.

## ಭಿತ್ತಿಪತ್ರ ತಯಾರಿ

ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಬಕ' ನಾಟಕದ ಪ್ರದರ್ಶನ ನಡೆಯಲಿದೆ. ಅದಕ್ಕಾಗಿ ವಿದ್ಯಾರ್ಥಿಗಳು ಸಾಕಷ್ಟು ತಯಾರಿಯನ್ನು ಮಾಡಿಕೊಂಡಿರುತ್ತಾರೆ. ನಾಟಕ ಪ್ರದರ್ಶನಗೊಳ್ಳುವ ಬಗ್ಗೆ ಪ್ರಚಾರದ ಕೆಲಸ ಆಗಬೇಕಾಗಿದೆ. ಅದಕ್ಕಾಗಿ ಭಿತ್ತಿಪತ್ರವೊಂದನ್ನು ತಯಾರಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಅದರಲ್ಲಿ ಬರಬೇಕಾದ ಮುಖ್ಯ ವಿಚಾರಗಳು, ವಿನ್ಯಾಸ ಇತ್ಯಾದಿಗಳ ಕುರಿತು ಚರ್ಚಿಸಿ ಸ್ಪಷ್ಟ ಮಾಹಿತಿ ಲಭಿಸಿದ ಬಳಿಕ ಗುಂಪಿನಲ್ಲಿ ವಿದ್ಯಾರ್ಥಿಗಳು ಭಿತ್ತಿ ಪತ್ರವನ್ನು ತಯಾರಿಸಲಿ. ಭಿತ್ತಿಪತ್ರವು ಆಕರ್ಷಣೀಯವಾಗಿ ಮೂಡಿ ಬರುವಂತಾಗಲು ಗಣಕಯಂತ್ರದ ಸಹಾಯವನ್ನು ಬಳಸಿಕೊಳ್ಳುವಂತೆ ಸೂಚಿಸುವುದು. ಐಎಸ್ಎಂನಲ್ಲಿ ಕನ್ನಡ ಅಕ್ಷರಗಳಲ್ಲಿ ಟೈಪ್ ಮಾಡುವುದನ್ನು ವಿದ್ಯಾರ್ಥಿಗಳೂ ಪ್ರೌಢ ಶಾಲಾ ಮಟ್ಟದಲ್ಲಿ ಕಲಿತಿರುತ್ತಾರೆ. ಇದಲ್ಲದೆ ನುಡಿ, ಬರಹ, ಶ್ರೀಲಿಪಿ ಮುಂತಾದ ಕನ್ನಡ ಲಿಪಿಗಳನ್ನು ಆಯ್ದು ಬೇರೆ ಬೇರೆ ವಿನ್ಯಾಸಗಳ ಮೂಲಕ ಭಿತ್ತಿ ಪತ್ರ ಆಕರ್ಷಕವಾಗುವಂತೆ ಮಾಡಲು ವಿದ್ಯಾರ್ಥಿಗಳಿಗೆ ನಿರ್ದೇಶಿಸುವುದು. ಬಳಿಕ ಅದರ ಕರಡಚ್ಚನ್ನು ತೆಗೆದು ತರಗತಿಯಲ್ಲಿ ಮಂಡಿಸಲಿ. ಶಾಲೆಯ ನೋಟೀಸ್ ಬೋರ್ಡ್‌ನಲ್ಲಿ ಅದನ್ನು ಪ್ರದರ್ಶಿಸಲಿ.

**ಭಿತ್ತಿಪತ್ರದ ಒಂದು ಮಾದರಿ**

**ವಿದ್ಯಾದಾಯಿನಿ ಹೈಯರ್ ಸೆಕೆಂಡರಿ ಶಾಲೆ ಕಾಸರಗೋಡು,**

**ಇದರ ವಾರ್ಷಿಕೋತ್ಸವದ ಪ್ರಯುಕ್ತ**

## ಬಕ ನಾಟಕ ಪ್ರದರ್ಶನ

| | | |
|---|---|---|
| ನಾಟಕ ರಚನೆ | : | ಎಂ.ಎಸ್.ಕೆ. ಪ್ರಭು |
| ನಿರ್ದೇಶನ | : | ಶ್ರೀ ಮಹಾಬಲೇಶ್ವರ ಶಾಂತಿನಗರ |
| ಸ್ಥಳ | : | ವಿದ್ಯಾದಾಯಿನಿ ಶಾಲಾ ಸಭಾಂಗಣ |
| ದಿನಾಂಕ | : | 24/12/2014 ಬುಧವಾರ |
| ಸಮಯ | : | ಸಂಜೆ 4 ಗಂಟೆ |

**ಕಲಾಭಿಮಾನಿಗಳಿಗೆ ಆತ್ಮೀಯ ಸ್ವಾಗತ**

***ಬನ್ನಿರಿ, ನೋಡಿರಿ, ಆಸ್ವಾದಿಸಿರಿ, ಪ್ರೋತ್ಸಾಹಿಸಿರಿ***

**ಓದುಗರ ಓಲೆಗೆ ಪತ್ರ**

ಸಮಾಜದಲ್ಲಿ ತಲೆ ಎತ್ತಿರುವ ಬಕಾಸುರರ (ಭ್ರಷ್ಟಾಚಾರಿಗಳು) ಕುರಿತಾದ ವಿಡಂಬನೆ 'ಬಕ' ನಾಟಕದಲ್ಲಿ ವ್ಯಕ್ತವಾಗಿದೆ. ಭ್ರಷ್ಟಾಚಾರ ಎಂಬ ಸಾಮಾಜಿಕ ಪಿಡುಗು ಈಗ ಎಲ್ಲೆಂದರಲ್ಲಿ ತಲೆ ಎತ್ತಿದೆ. ಭ್ರಷ್ಟಾಚಾರ ಮುಕ್ತ ಸಮಾಜದ ನಿರ್ಮಾಣವಾಗಬೇಕಾಗಿದೆ. ಈ ಪಿಡುಗಿನಿಂದ ರಕ್ಷಣೆ ಪಡೆಯುವ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸುವ ಉದ್ದೇಶದೊಂದಿಗೆ ಪತ್ರಿಕೆಯೊಂದರ 'ಓದುಗರ ಓಲೆ' ವಿಭಾಗಕ್ಕೆ ಪತ್ರ ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಪತ್ರದಲ್ಲಿ ಯಾವೆಲ್ಲ ವಿಚಾರಗಳು ಅಡಕವಾಗಿರಬೇಕು ಎಂಬ ಕುರಿತು ವಿದ್ಯಾರ್ಥಿಗಳು ಚರ್ಚಿಸಲಿ. ಸಿದ್ಧತೆಗಾಗಿ ಸಾಕಷ್ಟು ಸಮಯ ಕೊಟ್ಟ ಬಳಿಕ ವಿದ್ಯಾರ್ಥಿಗಳು ವೈಯಕ್ತಿಕವಾಗಿ 'ಓದುಗರ ಓಲೆ' ವಿಭಾಗಕ್ಕೆ ಬರೆಯುವ ಪತ್ರವನ್ನು ಸಿದ್ಧಪಡಿಸಲಿ. ತರಗತಿಯಲ್ಲಿ ಪ್ರತಿ ವಿದ್ಯಾರ್ಥಿಯೂ ಅದನ್ನು ಮಂಡಿಸಲಿ. ಉತ್ತಮಪಡಿಸಿ ಲೋಗ್ ಬುಕ್‌ನಲ್ಲಿ ಸೇರಿಸಿಕೊಳ್ಳಲಿ.

## ಓದುಗರ ಓಲೆ –ಒಂದು ಮಾದರಿ

### ಭ್ರಷ್ಟಾಚಾರಕ್ಕೆ ಕೊನೆ ಇಲ್ಲವೇ?

ಭ್ರಷ್ಟಾಚಾರ........ ಭ್ರಷ್ಟಾಚಾರ...... ಭ್ರಷ್ಟಾಚಾರ....... ಎಲ್ಲಿ ನೋಡಿದರೂ ಭ್ರಷ್ಟಾಚಾರ. ಆಧುನಿಕ ಸಮಾಜ ಅನುಭವಿಸುತ್ತಿರುವ ಪ್ರಧಾನ ಪಿಡುಗಾಗಿ ಭ್ರಷ್ಟಾಚಾರ ಮಾರ್ಪಟ್ಟಿದೆ. ಇದು ಸಾಮಾನ್ಯ ನಾಗರಿಕರನ್ನು ಬೆಂಬಿಡದೆ ಬಾಧಿಸುವ ಭೂತವಾಗಿ ಪರಿಣಮಿಸಿದೆ. ಭ್ರಷ್ಟಾಚಾರ ಮುಕ್ತ ಭಾರತದ ನಿರ್ಮಾಣವಾಗಬೇಕು ಎಂಬ ಉದ್ದೇಶದೊಂದಿಗೆ ಗಾಂಧಿವಾದಿ ಅಣ್ಣಾಹಜಾರೆ ಮುಂತಾದವರು ನಡೆಸಿದ ಹೋರಾಟಗಳೆಲ್ಲವೂ ವ್ಯರ್ಥವಾಗಿವೆ. ವಿದೇಶಗಳಲ್ಲಿರುವ ಕಾಳಧನವನ್ನು ತರುವ ಪ್ರಯತ್ನವೂ ವಿಫಲವಾಗಿದೆ. ಭಾರತದ ಆರ್ಥಿಕ, ಸಾಮಾಜಿಕ ಪ್ರಗತಿಗೆ ಭ್ರಷ್ಟಾಚಾರ ಮಾರಕವಾಗಿದೆ. ಆಧುನಿಕ ಬಕಾಸುರರ ಉಪಟಳದಿಂದ ಸಾಮಾನ್ಯ ಮನುಷ್ಯನೊಬ್ಬನಿಗೆ ಕಚೇರಿಗಳಿಗೆ ತೆರಳಿ ತನ್ನ ಕೆಲಸವನ್ನು ನಿರ್ವಹಿಸುವುದೂ ಕಷ್ಟವಾಗಿದೆ. ಯಾಕೆಂದರೆ ಹೋದ ಕೆಲಸದಲ್ಲಿ ಯಶ ಲಭಿಸಬೇಕಿದ್ದರೆ ಕೈಯಲ್ಲಿ ದುಡ್ಡನ್ನು ಹಿಡಿದೇ ತೆರಳಬೇಕಾದ ಪರಿಸ್ಥಿತಿ. ಸಾಮಾನ್ಯನ ಬವಣೆ ಕೇಳುವವರಿಲ್ಲ. ಸಾಮಾನ್ಯನ ಗೋಳಿಗೆ ಉತ್ತರವಿಲ್ಲ. ಇನ್ನು ಮುಂದಾದರೂ ಸಂಬಂಧಪಟ್ಟವರು ಈ ಕುರಿತು ಗಮನ ಹರಿಸಿ ಭ್ರಷ್ಟಾಚಾರಿಗಳ ದಂಧೆಗೆ ಇತಿಶ್ರೀ ಹಾಡುವಂತಾಗಲಿ.

ಕಾಸರಗೋಡು

21.08.2014 ಓರ್ವ ನಾಗರಿಕ

## ನುಡಿಗಟ್ಟು–ವಾಕ್ಯ ಪ್ರಯೋಗ

'ಬಕ' ನಾಟಕದಲ್ಲಿ ಸಾಕಷ್ಟು ನುಡಿಗಟ್ಟುಗಳು ಬಳಕೆಗೊಂಡಿವೆ.

ಉದಾ: ಎಂಜಲಿಗೆ ಕೈಯೊಡ್ಡು

ಒರೆಗೆ ಹಚ್ಚು

ಕಣ್ಣಿಗೆ ಮಣ್ಣೆರಚು

ಕಣ್ಣೀರಲ್ಲಿ ಕೈತೊಳೆ

ಕಂಕಣ ಬದ್ಧನಾಗು

ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು.

ತರಗತಿಯಲ್ಲಿ ಹೇಳಿಸುವುದು. ಹೀಗೆ ಮಾತಿನ ಮಧ್ಯೆ ಬಳಸಲ್ಪಡುವ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿ ವಾಕ್ಯದಲ್ಲಿ ಪ್ರಯೋಗಿಸುವಂತೆ ಸೂಚಿಸುವುದು. ಬಳಿಕ ವಿದ್ಯಾರ್ಥಿಗಳು ತರಗತಿಯಲ್ಲಿ ಮಂಡಿಸಲಿ.

- **ಎಂಜಲಿಗೆ ಕೈಯೊಡ್ಡು :** ಸ್ವಾಭಿಮಾನಿಯಾಗಿ ಸ್ವತಂತ್ರವಾಗಿ ದುಡಿದು ಸಂಪಾದಿಸದೆ ಪರರ ಎಂಜಲಿಗೆ ಕೈಯೊಡ್ಡಿ ಬದುಕುವುದರಲ್ಲಿ ಅರ್ಥ ಇಲ್ಲ.
- **ಒರೆಗೆ ಹಚ್ಚು :** ಯಾವುದನ್ನೇ ಆದರೂ ಮೇಲ್ನೋಟಕ್ಕೆ ಕಂಡುದನ್ನೇ ಸರಿ ಎಂದು ತಿಳಿಯಬಾರದು. ಪ್ರತಿಯೊಂದನ್ನು ಒರೆಗೆ ಹಚ್ಚಿ ನೋಡಬೇಕು.
- **ಕಣ್ಣಿಗೆ ಮಣ್ಣೆರಚು :** ಸ್ವಾರ್ಥ ಸಾಧನೆಗಾಗಿ ಉತ್ತಮರಂತೆ ನಟಿಸಿ ಪರರ ಕಣ್ಣಿಗೆ ಮಣ್ಣೆರಚಿ ಬದುಕುವುದು ಹೇಯ ಕೃತ್ಯ.
- **ಕಣ್ಣೀರಲ್ಲಿ ಕೈತೊಳೆ :** ಸುನಾಮಿಯಲ್ಲಿ ಬಲಿಯಾದ ಕುಟುಂಬಗಳೆಲ್ಲವೂ ಜೀವನಪೂರ್ತಿ ಕಣ್ಣೀರಲ್ಲಿ ಕೈತೊಳೆಯುವಂತಾಯಿತು.
- **ಕಂಕಣಬದ್ಧ :** ರಾಷ್ಟ್ರ ಸೇವೆಯನ್ನೇ ವ್ರತವಾಗಿಟ್ಟುಕೊಂಡು ಪ್ರತಿಯೊಬ್ಬರೂ ಕಂಕಣಬದ್ಧರಾಗಿ ದುಡಿದರೆ ಮಾತ್ರ ದೇಶದ ಅಭಿವೃದ್ಧಿಯಾಗುವುದು.

**ನಿಷೇದಾರ್ಥ ಪದಗಳು**

'ಅ' ಎಂಬ ಉಪಸರ್ಗವು ಬಂದು ಸೇರಿದಾಗ ಉಂಟಾಗುವ ನಿಷೇಧಾರ್ಥಕ ಪದಗಳನ್ನು ವಿದ್ಯಾರ್ಥಿಗಳು ಪಟ್ಟಿ ಮಾಡಲಿ. ಪರಸ್ಪರ ಹಂಚಿಕೊಂಡು ಅರ್ಥದಲ್ಲುಂಟಾದ ನಿಷೇಧಾರ್ಥವನ್ನು ಅರಿಯಲಿ.

**ಕೆಲವು ನಿಷೇಧಾರ್ಥಕ ಪದಗಳು**

| | | |
|---|---|---|
| ಕ್ಷಮ್ಯ | – | ಅಕ್ಷಮ್ಯ |
| ಜೀರ್ಣ | – | ಅಜೀರ್ಣ |
| ಘಟಿತ | – | ಅಘಟಿತ |
| ತೃಪ್ತಿ | – | ಅತೃಪ್ತಿ |
| ಚರ | – | ಅಚರ |
| ನಾಗರಿಕ | – | ಅನಾಗರಿಕ |

## ಹೆಚ್ಚಿನ ಓದಿಗೆ

| | | |
|---|---|---|
| ಮುಗುಳು | – | ಭುವೇಶ್ವರಿ ಹೆಗಡೆ |
| ಮಂಕುತಿಮ್ಮನ ಕಗ್ಗ | – | ಡಿ.ವಿ.ಜಿ. |
| ಮರುಳ ಮುನಿಯನ ಕಗ್ಗ | – | ಡಿ.ವಿ.ಜಿ. |
| ನಾಟಕ ರಂಗ ಭೂಮಿ | – | ಎಸ್.ವಿ. ರಂಗಣ್ಣ |

* * *